

# ತೆರೆದ ಪರಲೋಕಗಳು

ತೆರೆದ ಪರಲೋಕಗಳು

“…ಆಕಾಶವು ತೆರೆದು…” ಯೆಹೆಜ್ಕೇಲನು 1:1

ಆಶಿಷ್ ರಾಯ್‌ಚೂರ್

ಮುದ್ರಣ ಮತ್ತು ವಿತರಣೆ: **ಆಲ್ ಪೀಪಲ್ಸ್ ಚರ್ಚ್ ಮತ್ತು ವರ್ಲ್ಡ್ ಔಟ್‌ರೀಚ್, ಬೆಂಗಳೂರು**
ಪ್ರಥಮ ಪ್ರತಿ ಮುದ್ರಣ: ಜೂನ್ 2017

ಕನ್ನಡಕ್ಕೆ ಭಾಷಾಂತರಿಸಿದವರು: ರವಿಕುಮಾರ್ ಎಂ.
ಮುಖಪುಟ ಮತ್ತು ವರ್ಣವಿನ್ಯಾಸ: ಕರುಣಾ ಜೆರೋಮ್, ಬ್ರೈಫೈಯ್ಡ್ ಡಿಸೈನ್ಸ್

**Contact Information:**
All Peoples Church & World Outreach,
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

Unless otherwise indicated, all Scripture quotations are taken from the Holy Bible, New King James Version.

**ಉಚಿತ ವಿತರಣೆಗಾಗಿ**

ಈ ಪುಸ್ತಕದ ಉಚಿತ ವಿತರಣೆಯು ಆಲ್ ಪೀಪಲ್ಸ್ ಸಭೆಯ ಸಭಿಕರು, ಸ್ನೇಹಿತರು, ಪಾಲುಗಾರರ ಹಣಕಾಸಿನ ನೆರವಿನ ಮೂಲಕ ಸಾಧ್ಯವಾಗಿದೆ. ಇಂತಹ ಉಚಿತ ಪುಸ್ತಕ ಪ್ರಕಾಶನದ ಮೂಲಕ ನೀವು ಸಮೃದ್ಧಿ ಹೊಂದಿದ್ದರೆ ಆಲ್ ಪೀಪಲ್ಸ್ ಸಭೆಯ ಪ್ರಕಾಶನಗಳ ಉಚಿತ ವಿತರಣೆ ಮತ್ತು ಮುದ್ರಣಗಳಿಗೆ ಹಣಕಾಸಿನ ಸಹಾಯ ನೀಡುವಂತೆ ನಿಮ್ಮನ್ನು ಆಹ್ವಾನಿಸುತ್ತೇವೆ. ವಂದನೆಗಳು!

(Kannada Book - Open Heavens)

# ತೆರೆದ ಪರಲೋಕಗಳು

ತೆರೆದ ಪರಲೋಕಗಳು

"...ಆಕಾಶವು ತೆರೆದು... " ಯೆಹೆಜ್ಕೇಲನು 1:1

# ವಿಷಯಸೂಚಿ


| | | |
|---|---|---|
| | ಪೀಠಿಕೆ | 1 |
| 1. | ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ | 3 |
| 2. | ತೆರೆದ ಪರಲೋಕ ಅಂದರೇನು? | 6 |
| 3. | ಪರಲೋಕವು ತೆರೆಯಲು ಏನು ಕಾರಣವಾಗುತ್ತದೆ? | 13 |
| 4. | ನಿಮ್ಮ ಪ್ರದೇಶದ ಮೇಲೆ ಪರಲೋಕವು ತೆರೆದಿದೆಯೋ? | 21 |

# ಪೀಠಿಕೆ

ಜನರ, ಸಮುದಾಯಗಳ ಮತ್ತು ಭೌಗೋಳಿಕ ಪ್ರದೇಶಗಳ ಮೇಲೆ ಪರಲೋಕವು ತೆರೆಯಲ್ಪಟ್ಟಿರುವುದರ ಕುರಿತು ಕ್ರಿಸ್ತನ ದೇಹವು ನೂತನ ತಿಳುವಳಿಕೆಯನ್ನು ಸೂಕ್ಷ್ಮ ಪರಿಜ್ಞಾನವನ್ನೂ ಸಂಪಾದಿಸಿಕೊಳ್ಳುತ್ತಿದೆ.

ಪ್ರಪಂಚದಲ್ಲಿ ಕೆಲವು ಪ್ರದೇಶಗಳು ತೆರೆದ ಪರಲೋಕಗಳಿಗೆ ''ಬಿಸಿ ಸ್ಥಳ''ಗಳಾಗಿವೆ. ಎಂಬುದಾಗಿ ಕಾಣಿಸುತ್ತದೆ. ಆದ್ದರಿಂದ ಅಂತಹ ಪ್ರದೇಶಗಳಲ್ಲಿ ''ಪರಲೋಕವನ್ನು ಕೆಳಗೆ ತರುವುದು'' ಬಹಳ ಸುಲಭ. ಉದಾಹರಣೆಗೆ ವೇಲ್ಸ್ 1859ರಲ್ಲಿ ದೇವರ ಸಂದರ್ಶನವನ್ನು ಕಂಡಿತ್ತು ಮತ್ತು 1904ರಲ್ಲಿ ಮತ್ತೊಂದು ಉಜ್ಜೀವನ ಜರುಗುವುದನ್ನು ಸಹ ಕಂಡಿತ್ತು. ಫ್ಲೊರಿಡಾ ಪ್ರದೇಶದಲ್ಲಿ ಪೆನ್ಸಾಕೋಲಾ ಸುರಿಸುವಿಕೆಯನ್ನು ಮತ್ತು 1995ರಲ್ಲಿ ಬ್ರೌನ್ಸ್ ವಿಲ್ಲೆ ಉಜ್ಜೀವನವೆಂಬುದಾಗಿ ತಿಳಿದಿರುವ ಉಜ್ಜೀವನವನ್ನು ಕಂಡಿತ್ತು. ಇತ್ತೀಚೆಗೆ 2008ರಲ್ಲಿನ ಲೇಕ್‌ಲ್ಯಾಂಡ್ ಸುರಿಸುವಿಕೆಯು ನಡೆಯಿತು.

ಆದುದರಿಂದ ನಾವು ಹಿಂದೆ ನಡೆದ ಉಜ್ಜೀವನ ಸಂದರ್ಶನ ಸುರಿಸುವಿಕೆಗಳ ಪ್ರದೇಶಗಳ ಮೇಲೆ ಪರಲೋಕವು ಸುಲಭವಾಗಿ ತೆರೆಯಬೇಕೆಂಬುದನ್ನು ನಿರೀಕ್ಷಿಸಲು ಪ್ರೋತ್ಸಾಹಿಸಲ್ಪಟ್ಟಿದ್ದೇವೆ. ಭಾರತದಲ್ಲಿ ಶಿಲ್ಲಾಂಗ್ ಪ್ರಾಂತ್ಯವು ವೇಲ್ಸ್ ಮಿಷನೆರಿಗಳು ಹೊತ್ತು ತಂದ ಉಜ್ಜೀವನದ ಬೆಂಕಿಯನ್ನು 1906ರಲ್ಲಿ ಅನುಭವಿಸಿತು. 2000 ನೇ ವರ್ಷದ ಪ್ರಾರಂಭದಲ್ಲೇ, ಶಿಲ್ಲಾಂಗ್ ಪ್ರಾಂತ್ಯದ ವಿಶ್ವಾಸಿಗಳು ಮತ್ತೊಂದು ಉಜ್ಜೀವನವು ಉಂಟಾಗಲು ದೇವರನ್ನು ಹುಡುಕಲು ಪ್ರಾರಂಭಿಸಿದರು. ಅವರ ಶ್ರದ್ಧೆಯ ಪ್ರಾರ್ಥನೆಯು 2006ರಲ್ಲಿ ಶಿಲ್ಲಾಂಗ್ ಉಜ್ಜೀವನದಲ್ಲಿ ಪರಲೋಕವು ತೆರೆದಿರುವುದನ್ನು ತಿರುಗಿ ಕಂಡರು. ಪಂಜಾಬಿನ ಸಿಯಲ್‌ಕೋಟ್ 1904ರಲ್ಲಿನ ಪ್ರಾರಂಭದಲ್ಲಿ ಒಂದು ದೊಡ್ಡ ಉಜ್ಜೀವನವನ್ನು ಅನುಭವಿಸಿತು, ಜಾನ್ ಹೈಡೇ ಎಂಬುವರು ತಮ್ಮ ಉತ್ಸಾಹವುಳ್ಳ ಪ್ರಾರ್ಥನೆಯ ಮೂಲಕವಾಗಿ ಉಜ್ಜೀವನವು ಜನಿಸಲು ಸಾಧನವಾದರು. ಈ ಪ್ರದೇಶವು ತಿರುಗಿ ಇಂತಹ ಕರ್ತನ ಸಂದರ್ಶನಗಳನ್ನು ಮತ್ತು ಪುನರಾವರ್ತನೆಯ ಉಜ್ಜೀವನವನ್ನು ಅನುಭವಿಸದಿರುವುದಕ್ಕೆ ಕಾರಣವೇ ಇಲ್ಲ.

ಈ ಪುಸ್ತಕವು ಪರಲೋಕವು ತೆರೆಯಲ್ಪಟ್ಟಿರುವುದರ ಕುರಿತು. ಇದರ ಅರ್ಥ ಮತ್ತು ಅದರ ಫಲಿತಾಂಶ ಎಂಬುದರ ಕುರಿತು ಸತ್ಯವೇದದ ವಚನಗಳು ಪ್ರಕಟಿಸುವುದೇನು ಎಂಬುದರ ಮೇಲಿನ ಸಾಮಾನ್ಯ ಅಧ್ಯಯನವಾಗಿದೆ. ಅನೇಕರು, ಅವರ ಜೀವಿತಗಳ ಮೇಲೆ, ಅವರ ಸ್ಥಳೀಯ ಸಭೆಗಳ ಮೇಲೆ ಮತ್ತು ಅವರ ಸಮುದಾಯಗಳ ಮೇಲೆ ''ತೆರೆದ ಪರಲೋಕ'' ರೂಪಿಸಲು ಮತ್ತು ಪ್ರಾರ್ಥಿಸಲು ಪ್ರೋತ್ಸಾಹ ಹೊಂದುವಿರಿ ಎಂಬುದಾಗಿ ನಾವು ನಂಬುತ್ತೇವೆ. ಸ್ಥಳೀಯ ಸಭೆಗಳು ಪ್ರೇರಣೆ ಹೊಂದಿ ಒಟ್ಟಾಗಿ ಸೇರಿ ಬಂದು ಅವರ ನಗರದ ಅಥವಾ ಪ್ರದೇಶದ ಮೇಲೆ, ಸಭೆಯ ಸುಧಾರಣೆ ಮತ್ತು ಪಟ್ಟಣಗಳ ಅಥವಾ ಪ್ರದೇಶಗಳ ರೂಪಾಂತರಕ್ಕಾಗಿ ತೆರೆದ ಪರಲೋಕಕ್ಕಾಗಿ ಒಗ್ಗಟ್ಟಾಗಿ ಪರಿಶ್ರಮದಿಂದ ಪ್ರಾರ್ಥಿಸಲು ಪ್ರೋತ್ಸಾಹಿಸಲ್ಪಡುವರೆಂದು ನಾವು ನಂಬುತ್ತೇವೆ.

# 1

# ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ

ಪ್ರಾರ್ಥನೆ ಮಾಡಲು ನಮಗೆ ಬೋಧಿಸುವುದರಲ್ಲಿ, ನಮ್ಮ ಮುಂದೆ ಕರ್ತನು ಇಟ್ಟಂತಹ ಮೂಲತತ್ವವು ಪರಲೋಕವನ್ನು ಭೂಮಿಯ ಮೇಲೆ ಪಡೆದುಕೊಳ್ಳಲು ಹಿಂಬಾಲಿಸುವುದಾಗಿದೆ.

**''ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ''** (ಮತ್ತಾಯ 6:10)

ಪರಲೋಕದಲ್ಲಿ ಇರುವಂತಹದ್ದು ಭೂಮಿಯ ಮೇಲೆ ಸ್ಥಾಪಿಸಲ್ಪಡಬೇಕು ಮತ್ತು ಅನುಭವಿಸಲ್ಪಡಬೇಕು. ಪರಲೋಕದಲ್ಲಿರುವುದು ಭೂಮಿಯ ಮೇಲೆ ಬಿಡುಗಡೆಗೊಳ್ಳುವುದನ್ನು ನೋಡುವುದು ನಮಗೆ ದೊರೆತ ಒಂದು ಆಜ್ಞೆ ಅಥವಾ ನಿಯೋಗವಾಗಿದೆ. (ಮತ್ತಾಯ 16:18,19).

ದೇವರು ಈಗಾಗಲೇ ಆತನ ಜನರಿಗಾಗಿ ಪ್ರತಿಯೊಂದು ಆತ್ಮಿಕ ಆಶೀರ್ವಾದವನ್ನು ಬಿಡುಗಡೆಗೊಳಿಸಿದ್ದಾನೆ. ಪ್ರತಿಯೊಂದು ಸಹ ಪರಲೋಕ ರಾಜ್ಯದಿಂದ ನಮಗೆ ಕೊಡಲ್ಪಟ್ಟಿದೆ ಅಭಿಷೇಕ, ಅದ್ಭುತ-ಕಾರ್ಯಗಳು, ಸ್ವಸ್ಥತೆಗಳು, ನಮಗೆ ಅವಶ್ಯವಿರುವ ಸಾಮಾಗ್ರಿಗಳು ಇನ್ನೂ ಮುಂತಾದವುಗಳು ಈಗಾಗಲೇ ನಮಗೆ ಪರಲೋಕ ಸಾಮ್ರಾಜ್ಯದಿಂದ ಕೊಡಲ್ಪಟ್ಟಿವೆ.

**ನಮ್ಮ ಕರ್ತನಾದ ಯೇಸುಕ್ರಿಸ್ತನ ದೇವರೂ ತಂದೆಯೂ ಆಗಿರುವಾತನಿಗೆ ಸ್ತೋತ್ರ. ಆತನು ಪರಲೋಕದಲ್ಲಿನ ಸಕಲ ಆತ್ಮಿಯ ವರಗಳನ್ನು ನಮಗೆ ಕ್ರಿಸ್ತಯೇಸುವಿನಲ್ಲಿ ಅನುಗ್ರಹಿಸಿದ್ದಾನೆ.** (ಎಫೆಸದವರಿಗೆ 1:3)

ಸಕಲ ಪರಲೋಕದ ಆತ್ಮಿಕ ವರಗಳು ನಮಗೆ ಕ್ರಿಸ್ತಯೇಸುವಿನ ಮೂಲಕ ಈಗಾಗಲೇ ಕೊಡಲ್ಪಟ್ಟಿರುವುದರಿಂದ ಅಂತಹ ಆತ್ಮಿಕ ಆಶೀರ್ವಾದಗಳನ್ನು ಭೂಮಿಯ ಮೇಲೆ ನಮಗಾಗಿ ತೋರ್ಪಡುವದು ಈಗ ಸವಾಲಾಗಿದೆ. ಪರಲೋಕ ರಾಜ್ಯದಿಂದ

ನಮಗಾಗಿ ಏನು ಅನುಮತಿಸಲ್ಪಟ್ಟಿದೆಯೊ, ಅದರಲ್ಲಿ ಭೂಲೋಕದ ರಾಜ್ಯದಲ್ಲಿ ನಾವು ನಡೆಯುವುದು ನಮ್ಮ ಅಪೇಕ್ಷೆಯಾಗಿರಬೇಕು.

## ಪರಲೋಕ ರಾಜ್ಯಕ್ಕಾಗಿ ಮುಂದೊತ್ತಿ ಹೋಗುವುದು

**ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೂ ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ. ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನ ಮಾಡಿಕೊಳ್ಳುತ್ತಾರೆ.** (ಮತ್ತಾಯ 11:12)

ಸ್ನಾನಿಕನಾದ ಯೋಹಾನನು ಪರಲೋಕ ರಾಜ್ಯವು ಭೂಮಿಯ ಮೇಲೆ ಆಗಮಿಸುತ್ತದೆಂಬುದನ್ನು ಪರಿಚಯಿಸುವ ಸಂದೇಶದೊಡನೆ ಬಂದ ಪ್ರಥಮ ವ್ಯಕ್ತಿಯಾಗಿದ್ದಾನೆ. (ಮತ್ತಾಯ 3:2). ಪರಲೋಕ ರಾಜ್ಯವು ಭೂಮಿಯ ಮೇಲೆ ಆಗಮಿಸಿದ ಸಮಯದಿಂದ ಅದು ಘೋಷಣೆ ಮಾಡಿದಂತೆ ಆತ್ಮದಲ್ಲಿ ಬಲಾತ್ಕಾರಿಗಳಾಗಿರುವ ಜನರು ಒಳನುಗ್ಗುವವರು, ಪರಲೋಕ ರಾಜ್ಯದಲ್ಲಿರುವುದನ್ನು ತೆಗೆದುಕೊಳ್ಳುವವರಾಗಿದ್ದಾರೆ! ಅಲ್ಲಿ ಆತ್ಮದಲ್ಲಿ ಆಕ್ರಮಣಶೀಲರಾಗಿರಬೇಕು, ಪರಲೋಕರಾಜ್ಯದಲ್ಲಿ ಈಗಾಗಲೇ ನಮಗೆ ಕೊಡಲ್ಪಟ್ಟಿರುವುದನ್ನು ಬಲಾತ್ಕಾರದ ಪರಿಶ್ರಮಶೀಲ ಆತ್ಮದಿಂದ ತೆಗೆದುಕೊಳ್ಳಬೇಕು. ಈಗ ಇದು ಏಕೆ? ದೇವರು, ಪರಲೋಕ ರಾಜ್ಯವನ್ನು ನಮ್ಮಿಂದ ದೂರ ಇಟ್ಟಿದ್ದಾನೆಂದಬುದಾಗಿ ಅಲ್ಲ! ಖಚಿತವಾಗಿ ಆತನು ಭೂಮಿಯ ಮೇಲೆ ಪರಲೋಕವು ಬಿಡುಗಡೆಗೊಳ್ಳಬೇಕೆಂಬುದಾಗಿ ಅಪೇಕ್ಷಿಸುವಾತನು. ಪರಲೋಕ ರಾಜ್ಯವನ್ನು ನಮಗೆ ಕೊಡುವುದು ಆತನ ಒಳ್ಳೆಯ ಇಷ್ಟವಾಗಿದೆ. (ಲೂಕ 12:32). ಆತ್ಮಿಕ ಬಲಾತ್ಕಾರವು ಏಕೆ ಅಗತ್ಯ ಎಂಬುದಕ್ಕೆ ನಾವು ಎರಡು ಕಾರಣಗಳನ್ನು ನೋಡುತ್ತೇನೆ.

ಮೊದಲನೆಯದಾಗಿ : ನಮಗೆ ಏನೇನು ಕೊಡಲ್ಪಟ್ಟಿದೆಯೊ ಅವುಗಳನ್ನು ನಾವು ಪಡೆದುಕೊಳ್ಳದಂತೆ ಪರಿಶ್ರಮಶೀಲ ಎಲ್ಲಾ ರೀತಿಯ ವಿರುದ್ಧ ಕಾರ್ಯ ಮಾಡುವವನಾದ ವೈರಿಯು, ದುಷ್ಟನು, ದುರಾತ್ಮನು ಇದ್ದಾನೆ ಎಂಬುದು ನಮಗೆ ಗೊತ್ತು. ಪರಲೋಕವು ಭೂಮಿಯ ಮೇಲಿರುವುದು ಅವನಿಗೆ ಬೇಡವಾಗಿದೆ. ಹೀಗಾಗಿ ಸಾಧ್ಯವಾದ ಪ್ರತಿಯೊಂದು ವೈಖರಿಯಲ್ಲಿ ನಮಗೆ ತೊಡಕು ಉಂಟುಮಾಡಲು ಪ್ರಯತ್ನಿಸುತ್ತಾನೆ.

ಎರಡನೆಯದಾಗಿ : ಆತ್ಮದಲ್ಲಿ ಬಲಾತ್ಕಾರದ ಪರಿಶ್ರಮಗಳನ್ನು ಮಾಡುವ ಸ್ಥಳಕ್ಕೆ ಬರುವಾಗ ಅದು ನಾವು ಪಡೆದಿರುವುಗಳಲ್ಲಿ ನಡೆಯಲು ನಮ್ಮನ್ನು ಸಿದ್ಧಗೊಳಿಸುತ್ತದೆ. ನಾವು ಪಡೆಯಲು ಸಿದ್ಧರಾಗಿರುವುದು ಅಗತ್ಯ.

ಮತ್ತೊಂದು ಕಡೆಯಲ್ಲಿ ಸುರಿಸುವಿಕೆಯ ಸಮಯದಲ್ಲಿ (ಉಜ್ಜೀವನ ಅಥವಾ ಸಂದರ್ಶನ) ನಾವು ''ತೆರೆದ ಪರಲೋಕ'' ಎಂಬುದಾಗಿ ಕರೆಯುವುದನ್ನು ಅನುಭವಿಸುತ್ತೇವೆ. ಪರಲೋಕವು ಭೂಮಿಯನ್ನು ಆಕ್ರಮಿಸಿದ ಸಮಯದಲ್ಲಿ ದೇವರ ರಾಜ್ಯದ ವಿಷಯಗಳನ್ನು ಪಡೆಯುವುದು ಬಹಳ ಸುಲಭಗೊಳ್ಳುತ್ತದೆ. ಅಂದರೆ ಖಚಿತವಾಗಿ ಇದು ನಮ್ಮ ಮೇಲೆ ಸುರಿಸಲ್ಪಡುತ್ತದೆ. ಎಂಬುದಾಗಿ ಅರ್ಥ! ಪರಲೋಕವು ತೆರೆದಿದೆ. ಆದುದರಿಂದ ಪರಲೋಕ ರಾಜ್ಯದಲ್ಲಿನ ನಮ್ಮವುಗಳನ್ನು ತೆಗೆದುಕೊಂಡು ಭೂಲೋಕದ ರಾಜ್ಯದಲ್ಲಿ ಅದರಲ್ಲಿ ನಡೆಯುವುದು ಅತಿ ಸುಲಭವಾಗಿದೆ.

ನಾವು ''ಸುರಿಸುವಿಕೆ,' 'ಸಂದರ್ಶನ' ಮತ್ತು 'ಉಜ್ಜೀವನ' ಎಂಬ ಶಬ್ಧಗಳನ್ನು ದೇವರ ಒಂದೇ ರೀತಿಯ ಕಾರ್ಯವನ್ನು ಹೇಳಲು ಅದಲು ಬದಲು ಮಾಡಿ ಉಪಯೋಗಿಸಿದ್ದೇವೆ. ಸ್ಪಷ್ಟತೆಯ ಉದ್ದೇಶಕ್ಕಾಗಿ, 'ಸುರಿಸುವಿಕೆ' ಯು ಪರಲೋಕವು ತೆರೆದು ದೇವರ ಪ್ರಸನ್ನತೆಯು ಜನರ ಮೇಲೆ ಮಳೆಯ ರೂಪದಲ್ಲಿ ಬಿಡುಗಡೆಗೊಳ್ಳುವ ಸುಸಮಯವಾಗಿದೆ. ''ಸಂದರ್ಶನವು'' ದೇವರು ನಮ್ಮ ಮಧ್ಯದಲ್ಲಿ ನಡೆಯುವಾಗ ಪ್ರಬಲ ಸೂಚಕಕಾರ್ಯಗಳು, ಅದ್ಭುತಕಾರ್ಯಗಳು ಪ್ರಕೃತ್ಯತೀತ ಸಂಧಿಸುವಿಕೆ ಮತ್ತು ಬದಲಾದ ಜೀವಿತಗಳ ಸುಸಮಯವಾಗಿದೆ. ''ಉಜ್ಜೀವನ'' ಎಂಬುದರ ಅರ್ಥವು ಸೊಂಪಾಗು, ಝಳಪಿಸು ಅಥವಾ ಪುನಃ ಹೊಸದಾಗಿ ವಿಕಸಿಸು (ಅರಳು), ತಿರುಗಿ ಜೀವಿಸು ಅಥವಾ ಜೀವಿತವನ್ನು ತಿರುಗಿ ಸಂಪಾದಿಸು. ಏನು ಒಣಗಿರುತ್ತದೋ ಈಗ ಸೊಂಪಾಗಲೂ, ಸಮೃದ್ಧಿಯಾಗಲೂ ಪ್ರಾರಂಭಿಸುತ್ತದೆ. ಮತ್ತು ಬೆಂಕಿಯು ಪುನಃ ಹೊತ್ತಿಸಲ್ಪಡುತ್ತದೆ. ಆದುದರಿಂದ ಉಜ್ಜೀವನವು ಉಜ್ಜೀವಿಸಗೊಳಿಸುವುದು ಪುನಃ ಚಟುವಟಿಕೆಗೊಳ್ಳುವಂತೆ ಮಾಡುವುದು ಮತ್ತು ವೈಯಕ್ತಿಕವಾಗಿ ವಿಶ್ವಾಸಿಗಳಲ್ಲಿ ಮತ್ತು ಸಭೆಯಲ್ಲಿ ಹಿಂದೆ ಸ್ಥಾಪಿಸಲ್ಪಟ್ಟಿದ್ದ ಮತ್ತು ಅನುಭವಿಸಲ್ಪಟ್ಟಿದವುಗಳನ್ನು ಪುನಃ ಹೊತ್ತಿಸುವುದಾಗಿದೆ.

# 2

# ತೆರೆದ ಪರಲೋಕ ಅಂದರೇನು?

''ತೆರೆದ ಪರಲೋಕವು'' ದೇವಜನರ ಮಧ್ಯದಲ್ಲಿನ ಸುರಿಸುವಿಕೆಯ ಸುಸಮಯ, ದೈವಿಕ ಸಂದರ್ಶನದ ಸುಸಮಯ ಮತ್ತು ಉಜ್ಜೀವನವಾಗಿದೆ. ದೇವಜನರು ಆತ್ಮಿಕ ಮತ್ತು ಭೌತಿಕ ಆಶೀರ್ವಾದಗಳ ಸುರಿಸುವಿಕೆಗಳನ್ನು ಅನುಭವಿಸಲು ಪ್ರಾರಂಭಿಸುತ್ತಾರೆ. ಇದು ತುಳುಕಿ, ಸಮುದಾಯಗಳಿಗೆ ಅಥವಾ ಪ್ರದೇಶಗಳಿಗೆ ''ಹೊರಹರಿಯುತ್ತದೆ'' ಪರಿಣಾಮವಾಗಿ ರಕ್ಷಿಸಲ್ಪಡದಿರುವವರೂ ಸಹ ಇದರ ಪ್ರಭಾವಕ್ಕೊಳಗಾಗುತ್ತಾರೆ.

## ತೆರೆದ ಪರಲೋಕ ಅದರ ದೈವಿಕ ಒದಗಿಸುವಿಕೆ

**ಯೆಹೋವನು ಆಕಾಶದಲ್ಲಿರುವ ತನ್ನ ಜಲನಿಧಿಯನ್ನು ತೆರೆದು ನಿಮ್ಮ ದೇಶದ ಮೇಲೆ ಬೆಳೆಗೆ ಬೇಕಾದ ಹಾಗೆ ಮಳೆಯನ್ನು ಸುರಿಸಿ ನಿಮ್ಮ ಎಲ್ಲಾ ವ್ಯವಸಾಯವನ್ನೂ ಸಫಲ ಮಾಡುವನು. ನೀವು ಅನೇಕ ಜನಗಳಿಗೆ ಸಾಲಕೊಡುವಿರೇ ಹೊರತು ಸಾಲತೆಗೆದುಕೊಳ್ಳುವುದಿಲ್ಲ.** (ಧರ್ಮೋಪದೇಶಕಾಂಡ 28:12).

**ಆತನು ಮೇಘಗಳಿಗೆ ಅಪ್ಪಣೆಕೊಟ್ಟು ಆಕಾಶದ್ವಾರಗಳನ್ನು ತೆರೆದು ಸ್ವರ್ಗಧಾನ್ಯವಾದ ಮನ್ನವನ್ನು ಅವರಿಗೋಸ್ಕರ ಸುರಿಸಿ ಉಣ್ಣಲಿಕ್ಕೆ ಕೊಟ್ಟನು. ಅವರಲ್ಲಿ ಪ್ರತಿಯೊಬ್ಬನು ದೇವದೂತರ ಆಹಾರವನ್ನು ಭಜಿಸಿದನು. ಆತನು ಅವರಿಗೆ ತೃಪ್ತಿ ಭೋಜನವನ್ನು ಕೊಟ್ಟನು** (ಕೀರ್ತನೆಗಳು 78:23-25).

**ನನ್ನ ಆಲಯವು ಆಹಾರಶೂನ್ಯವಾಗದಂತೆ ನೀವು ದಶಮಾಂಶ ಯಾವತ್ತನ್ನೂ ಬಂಡಾರಕ್ಕೆ ತೆಗೆದುಕೊಂಡು ಬನ್ನಿರಿ, ನಾನು ಪರಲೋಕದ ದ್ವಾರಗಳನ್ನು ತೆರೆದು ಸ್ಥಳಹಿಡಿಯಲಾಗದಷ್ಟು ಸುವರವನ್ನು ಸುರಿಯುವನೋ ಇಲ್ಲವೋ ನನ್ನನ್ನು ಹೀಗೆ ಪರೀಕ್ಷಿಸಿರಿ; ಇದು ಸೇನಾಧೀಶ್ವರ ಯೆಹೋವನ ನುಡಿ.** (ಮಲಾಕಿಯ 3:10)

ಈ ವಚನಭಾಗಗಳು ಪರಲೋಕದ ಬಾಗಿಲುಗಳು ಮತ್ತು ಕಿಟಕಿಗಳು ದೇವಜನರ ಜೀವಿತಗಳ ಮೇಲೆ ದೈವಿಕ ಒದಗಿಸುವಿಕೆಯ ಬಿಡುಗಡೆಗೊಳಿಸುವುದಕ್ಕಾಗಿ ತೆರೆಯಲ್ಪಡುತ್ತದೆ ಎಂಬುದಾಗಿ ಉಲ್ಲೇಖಿಸುತ್ತದೆ. ಜನರ ಅಗತ್ಯತೆಗಳು ಪ್ರಕೃತಿತೀತವಾಗಿ, ದೈವಿಕವಾಗಿ ಪೂರೈಕೆಯಾಗುತ್ತವೆ. ಕೆಲಸಗಳು, ಪದೋನ್ನತಿ, ಆರ್ಥಿಕ ಆವರ್ತಿ, ವ್ಯಾಪಾರಗಳ ಅಭಿವೃದ್ಧಿ, ಸಾಲ ಅಳಿಸಿಬಿಡುವಿಕೆ, ಕಳೆದುಹೋಗಿದ್ದರ ಪುನರ್ಲಾಭ, ಅನ್ಯಾಯವಾಗಿ ನಿಮ್ಮಿಂದ ತೆಗೆದುಕೊಂಡಿದ್ದನ್ನು ತಿರುಗಿ ಪಡೆಯುವುದು, ಇನ್ನೂ ಅತ್ಯಧಿಕವಾದ ಭೌತಿಕ ಆಶೀರ್ವಾದಗಳು ದೇವಜನರ ಜೀವಿತಗಳಲ್ಲಿ

ಜರುಗಲು ಪ್ರಾರಂಭಿಸುತ್ತವೆ. ಇತರೆ ಸಮಯಗಳಲ್ಲಿ ಇಂತಹ, ವಿಷಯಗಳು ಜರುಗುವುದಿಲ್ಲ ಎಂಬುದಾಗಿ ಹೇಳುವುದಲ್ಲ. ದೇವರು ಆತನ ಮಾತುಗಳಿಗೆ ನಂಬಿಗಸ್ತ ಮತ್ತು ಯಾವಾಗಲೂ ನಮ್ಮ ಅಗತ್ಯತೆಗಳನ್ನು ಪೂರೈಸುತ್ತಾನೆ (ಫಿಲಿಪ್ಪಿಯವರಿಗೆ 4:19). ಹೌದು ನಮ್ಮ ಪ್ರಾರ್ಥನೆಗಳಿಗೆ ಉತ್ತರ ಪಡೆದು ನಮ್ಮ ಅಗತ್ಯತೆಗಳು ಪೂರೈಕೆಯಾಗಲು ನಾವು ಯಾವಾಗಲೂ ನಂಬಿಕೆಯಲ್ಲಿ ನಡೆಯಬೇಕು. (ಮಾರ್ಕ 11:24) ಹಾಗಿದ್ದರೂ, ಪರಲೋಕವು ತೆರೆದ ಸುಸಮಯದಲ್ಲಿ ಅತ್ಯಧಿಕವಾದ ಭೌತಿಕ ಆಶೀರ್ವಾದಗಳು ದೇವಜನರ ಮೇಲೆ ಸುರಿಸುತ್ತವೆ. ಇವು ಸ್ಪಷ್ಟವಾದವುಗಳು. ಅಲ್ಲಿ ಏನಾದರೂ ಭಿನ್ನವಾದುದು ಜರುಗುತ್ತಿರುತ್ತದೆ.

## ತೆರೆದ ಪರಲೋಕ ಅಂದರೆ ದೇವರ ಆತ್ಮನ ಸುರಿಸುವಿಕೆ

**ಯೇಸು ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು ದೇವರ ಆತ್ಮ ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವುದನ್ನು ಕಂಡನು** (ಮತ್ತಾಯ 3:16).

''ಪರಲೋಕ ತೆರೆಯಿತು'' ಎಂಬುದು ದೇವರ ಆತ್ಮನ ಸುರಿಸುವಿಕೆಯ ಸಂಬಂಧದಲ್ಲಿ ಉಪಯೋಗಿಸಲ್ಪಟ್ಟಿದೆ. ಯೇಸುವು ಆತ್ಮನಿಂದ ಅಭಿಷೇಕಿಸಲ್ಪಟ್ಟಿದ್ದನು. ಆತನು ಅಳತೆಯಿಲ್ಲದಷ್ಟು ಆತ್ಮನನ್ನು ಹೊಂದಿದ್ದನು. (ಲೂಕ 4:17, ಅಪೊಸ್ತಲರ ಕೃತ್ಯಗಳು 10:38 ಯೋಹಾನ 3:34) ಇದರ ಫಲಿತಾಂಶವೇನೆಂದರೆ ಯೇಸು ಜನರಿಗೆ ಸೇವೆ ಮಾಡುತ್ತಿರುವಾಗ ಆತನು ಮಾಡಿದ ಪ್ರಬಲ ಅದ್ಭುತಕಾರ್ಯಗಳು, ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳಾಗಿವೆ. ಯೇಸುವು ತಾನು ಹೋದ ಕಡೆಯಲೆಲ್ಲಾ ತೆರೆದ ಪರಲೋಕದ ಕೆಳಗೆ ನಡೆದನೆಂಬುದನ್ನು ವ್ಯಾಖ್ಯಾನಿಸುವುದು ಸುರಕ್ಷಿತವಾದುದು.ಆತನಿಗೆ ಪರಲೋಕಗಳು ಯಾವಾಗಲೂ ತೆರಯಲ್ಪಟ್ಟಿದ್ದವು. ಅದು ಒಂದು ದೈವಿಕ ಸಂದರ್ಶನದ ಸಮಯವಾಗಿತ್ತು. ದೇವರು ಆತನ ಜನರನ್ನು ಸಂದರ್ಶಿಸಿದನು. (ಲೂಕ 1:68;7:16)

ಅಪೊಸ್ತಲರ ಕೃತ್ಯಗಳ ಮೊದಲಿನ ಎಂಟು ಅಧ್ಯಾಯಗಳು ಯೇಸುವಿನ ಸೇವಾಕಾಲವನ್ನು ಹಿಂಬಾಲಿಸಿ, ಯೆರೂಸಲೇಮಿನ ಮೇಲೆ ಅದ್ಭುತಕರವಾದ ಪರಲೋಕದ ತೆರೆಯುವಿಕೆಯ ಸುಸಮಯವನ್ನು ವಿವರಿಸುತ್ತದೆ. ಇದು ದೇವರ ಆತ್ಮನ ಒಂದು ಪ್ರಬಲ ಸುರಿಸುವಿಕೆಯ ಸುಸಮಯವಾಗಿತ್ತು (ಅಪೊಸ್ತಲರ ಕೃತ್ಯಗಳು 2:17,18)

ಪರಿಣಾಮವಾಗಿ ಪ್ರಬಲವಾದ ಅದ್ಭುತಕಾರ್ಯಗಳು ಸೂಚಕಕಾರ್ಯಗಳು ಮತ್ತು ಮಹತ್ಕಾರ್ಯಗಳು ನಡೆದು ಅನೇಕರು ಕರ್ತನ ಕಡೆಗೆ ತಿರುಗಿಕೊಂಡರು (ಅಪೊಸ್ತಲರ ಕೃತ್ಯಗಳು 2:43:47).

## ತೆರೆದ ಪರಲೋಕವು ಅಂದರೆ ದೇವರ ನೀತಿ ಮತ್ತು ಪ್ರಸನ್ನತೆಯ ಸುರಿಸುವಿಕೆ

**ಆಕಾಶಮಂಡಲವೇ, ಮೇಲಿನಿಂದ ಧರ್ಮರಸವನ್ನು ವರ್ಷಿಸು, ಗಗನವು ಸುರಿಸಲಿ; ಭೂಮಿಯು ಒಡೆದು ರಕ್ಷಣೆಯನ್ನು ಮೊಳೆಯಿಸಿ ಅದರೊಡನೆ ನೀತಿಫಲವನ್ನು ಬೆಳೆಯಿಸಲಿ, ಯೆಹೋವನೆಂಬ ನಾನೇ ಇದಕ್ಕೆಲ್ಲಾ ಕರ್ತನು.** (ಯೆಶಾಯ 45:8)

**ಅವರು ಯೆಹೋವನ ಕಡೆಗೆ ಹಿಂದಿರುಗಿ ಹೋಗೋಣ ಬನ್ನಿರಿ; ನಮ್ಮನ್ನು ಸೀಳಿಬಿಟ್ಟವನು ಆತನೇ ಆತನೇ ಸ್ವಸ್ಥ ಮಾಡುವನು; ಹೊಡೆದವನು ಆತನೇ, ಆತನೇ ನಮ್ಮ ಗಾಯಗಳನ್ನು ಕಟ್ಟುವನು. ಒಂದೆರಡು ದಿನದ ಮೇಲೆ ಆತನು ನಮ್ಮನ್ನು ಬದುಕಿಸುವನು; ಮೂರನೆಯ ದಿನದಲ್ಲಿ ಆತನು ನಮ್ಮನ್ನೆಬ್ಬಿಸಲು ಆತನ ಸಾನಿಧ್ಯದಲ್ಲಿ ಬಾಳುವೆವು. ಯೆಹೋವನನ್ನು ತಿಳಿದುಕೊಳ್ಳೋಣ, ಹುಡುಕಿ ಹುಡುಕಿ ತಿಳಿದುಕೊಳ್ಳೋಣ. ಆತನ ಆಗಮನವು ಉದಯದಂತೆ ನಿಶ್ಚಯ; ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪು ಮಾಡುವ, ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಅಂದುಕೊಂಡು ನನ್ನನ್ನು ಮರೆ ಹೋಗುವರು)** (ಹೋಶೇಯ 6:1-3).

ಪರಲೋಕವು ತೆರೆದ ಸುಸಮಯದಲ್ಲಿ ದೇವರ ಪ್ರಸನ್ನತೆ ಮತ್ತು ನೀತಿ ಜಡಿಮಳೆಯಿರುತ್ತದೆ, ದೇವರು ಮಳೆಯ ರೂಪದಲ್ಲಿ ನಮ್ಮ ಬಳಿಗೆ ಬರುತ್ತಾನೆ. ದೇವಜನರು ದೇವರ ನೀತಿ ಮತ್ತು ಪ್ರಸನ್ನತೆಯ ಇಂದ್ರಿಯ ಗೋಚರ ಹೊಂದಿ ಪರಿಶುದ್ಧತೆ, ಶುದ್ಧತೆ, ಪವಿತ್ರ ಮಾಡುವಿಕೆ, ಮತ್ತು ದೀಕ್ಷೆಯನ್ನು ತಿಳಿಯುವುದರಲ್ಲಿ ಒಂದು ಹೊಸ ಮಟ್ಟಕ್ಕೆ ತಲುಪುತ್ತಾರೆ. ವೈಯಕ್ತಿಕ ಜೀವಿತಗಳಲ್ಲಿ ಪಾಪಕ್ಕೆ ಯಾವುದೇ ರೀತಿಯ ಸಹನೆಯಿರುವುದಿಲ್ಲ ''ದೇವರಿಗೆ ಮೆಚ್ಚಿಕೆಯಾಗಿರದ ಒಮ್ಮೆ ಅನುಸರಿಸುತ್ತಿದ್ದ ಹವ್ಯಾಸಗಳು ಮತ್ತು ನಡವಳಿಕೆಗಳು ಈಗ ತಿರಸ್ಕರಿಸಲ್ಪಟ್ಟಿವೆ ಮತ್ತು ತೆಗೆದುಹಾಕಲ್ಪಟ್ಟಿವೆ.

ದೇವರ ಪ್ರಸನ್ನತೆಯನ್ನು ಸ್ವೀಕರಿಸಲು ಜನರ ಹೃದಯಗಳು ತೆರೆಯುತ್ತವೆ. ಆತನ ನೀತಿವಂತಿಕೆಗೆ ಕರೆ ಮತ್ತು ಆತನ ಕಾರ್ಯಮಾಡಲು ಇಷ್ಟಪಡುವುದೆಲ್ಲವುಗಳಿಗೆ ಜನರು ತಮ್ಮ ಹೃದಯಗಳನ್ನು ಆಗಾಧವಾಗಿ ತೆರೆಯುತ್ತಾರೆ. ಅಲ್ಲಿ ದೇವರ ಬಗ್ಗೆ ಹಸಿವು (ಬಯಕೆ), ದಾಹ ಮತ್ತು ಕರ್ತನ ಜ್ಞಾನದ ಅರಸುವಿಕೆಯಿರುತ್ತದೆ.

## ತೆರೆದ ಪರಲೋಕಗಳು ಅಂದರೆ ದೇವದೂತರ ಹೆಚ್ಚುವರಿ ಕಾರ್ಯ ಚಟುವಟಿಕೆಗಳು:

**ಇದಲ್ಲದೆ ಅವನಿಗೆ ನಾನು ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪರಲೋಕವು ತೆರೆದಿರುವದನ್ನೂ ಮನುಷ್ಯಕುಮಾರನ ಮೇಲೆ ದೇವದೂತರು ಏರಿಹೋಗುತ್ತಾ ಇಳಿದು ಬರುತ್ತಾ ಇರುವುದನ್ನು ನೋಡುವಿರಿ ಎಂದು ಹೇಳಿದನು.** (ಯೋಹಾನ 1:51)

**ಯಾಕೋಬನು ಖಾರಾನಿಗೆ ಹೋಗಬೇಕೆಂದು ಬೇರ್ಶೆಬದಿಂದ ಹೊರಟನು. ಅವನು ಹೋಗುತ್ತಿರಲು ಒಂದು ಸ್ಥಳಕ್ಕೆ ಬಂದು ಸೇರಿದಾಗ ಹೊತ್ತು ಮುಳುಗಿದ್ದರಿಂದ ಆ ರಾತ್ರಿ ಅಲ್ಲಿಯೇ ಇಳಿದುಕೊಂಡನು. ಅವನು ಅಲ್ಲಿದ್ದ ಕಲ್ಲುಗಳಲ್ಲಿ ಒಂದು ಕಲ್ಲನ್ನು ತಲೆದಿಂಬಾಗಿ ಇಟ್ಟುಕೊಂಡನು ಆ ಸ್ಥಳದಲ್ಲಿ ಮಲಗಿಕೊಂಡನು. ಆ ರಾತ್ರಿ ಅವನು ಕನಸುಕಂಡನು. ಆ ಕನಸಿನಲ್ಲಿ ಒಂದು ನಿಚ್ಚಣಿಗೆ ನೆಲದ ಮೇಲೆ ನಿಂತಿತು. ಅದರ ತುದಿ ಆಕಾಶವನ್ನು ಮುಟ್ಟಿತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು. ಇದಲ್ಲದೆ ಯೆಹೋವನು ಅವನ ಬಳಿಯಲ್ಲಿ ನಿಂತು ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿರುವ ಯೆಹೋವನು ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ. ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು. ನೀನು ಪೂರ್ವ ಪಶ್ಚಿಮದಕ್ಷಿಣೋತ್ತರ ದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೆ ಆಶೀರ್ವಾದವುಂಟಾಗುವದು. ಇದಲ್ಲದೆ ನಾನು ನಿನ್ನ ಸಂಗಡ ಇದ್ದು ನೀನು ಹೋಗುವ ಎಲ್ಲಾ ಸ್ಥಳಗಳಲ್ಲಿ ನಿನ್ನನ್ನು ಕಾಪಾಡಿ ತಿರಿಗಿ ಈ ದೇಶಕ್ಕೆ ಬರಮಾಡುತ್ತೇನೆ. ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸಿದ ಹೊರತು ಬಿಡುವುದಿಲ್ಲ ಅಂದನು. ಯಾಕೋಬನು ನಿದ್ದೆಯಿಂದ ಎಚ್ಚತ್ತು - ನಿಜವಾಗಿ ಯೆಹೋವನು ಈ ಸ್ಥಳದಲ್ಲಿ ಇದ್ದಾನೆ; ಅದು ನನಗೆ ತಿಳಿಯದೆ ಹೋಯಿತು ಅಂದುಕೊಂಡು ಭಯಪಟ್ಟವನಾಗಿ - ಈ ಸ್ಥಳವು ಎಷ್ಟೋ ಭಯಂಕರವಾದದ್ದು; ಇದು ದೇವರ ಮನೆಯೇ ಹೊರತು ಬೇರೆಯಲ್ಲ ಇದು ಪರಲೋಕದ ಬಾಗಿಲು ಎಂದು ಹೇಳಿದನು.** (ಆದಿಕಾಂಡ 28:10-17)

ದೇವದೂತರು ವಿಶ್ವಾಸಿಗಳಿಗೆ ಸೇವೆ ಸಲ್ಲಿಸಲು ಕಳುಹಿಸಲ್ಪಟ್ಟ, ಸೇವೆ ಸಲ್ಲಿಸುತ್ತಿರುವ ಆತ್ಮ (ಇಬ್ರಿಯ 1:14) ಪರಲೋಕವು ತೆರೆದ ಋತುವಿನಲ್ಲಿ ದೇವದೂತರ ಅತೀ ಹೆಚ್ಚಾದ ಕಾರ್ಯಚಟುವಟಿಕೆಗಳಿರುತ್ತವೆ. ಜನರು ದೇವದೂತರ ಸಂಧಿಸುವಿಕೆಗಳಲ್ಲಿ ಹೆಚ್ಚುವರಿಯನ್ನು ಅನುಭವಿಸಲು ಪ್ರಾರಂಭಿಸುತ್ತಾರೆ.

ನಾವು ಇದರ ಕುರಿತು ಸಂದೇಶವನ್ನು ಆಗಾಗ್ಗೆ ಕೇಳದಿದ್ದರೂ ದೇವಜನರಾಗಿ ನಮಗೆ ದೇವದೂತರ ಸೇವೆಯು ಬಹಳ ಪ್ರಾಮುಖ್ಯ. ಯೇಸುವು ಅಡವಿಯಲ್ಲಿ ಶೋಧನೆಗೊಳಗಾದ ಬಳಿಕ ತಕ್ಷಣವಾಗಿ ಕರ್ತನಾದ ಯೇಸುವು ದೇವದೂತರಿಂದ ಸೇವೆಸಲ್ಲಿಸಲ್ಪಟ್ಟನು. (ಮತ್ತಾಯ 4:11) ಗೇತ್ಸೆಮನೆ ತೋಟದಲ್ಲಿ ಆತನ ತೀವ್ರ

ಮರಣಯಾತನೆಯ ತಾಸಿನಲ್ಲಿ, ಯೇಸುವು ಒಬ್ಬ ದೇವದೂತನಿಂದ ಬಲಗೊಳಿಸಲ್ಪಟ್ಟನು (ಲೂಕ 22:43) ಇಂತಹ ಮಾರ್ಗಗಳಲ್ಲಿ ಯೇಸುವು ಸೇವೆಸಲ್ಲಿಸಿಕೊಳ್ಳುವಾಗ, ನಾವು ಮತ್ತು ನೀವು ದೇವದೂತರ ಸೇವೆಯಿಂದ ಎಷ್ಟೊಂದು ಅಧಿಕವಾಗಿ ಬಲ ಪಡೆಯಬಹುದು!

ಅಪೊಸ್ತಲರಿಗೂ ದೇವದೂತರು ಸೇವೆ ಸಲ್ಲಿಸಿದರು. ಅಪೊಸ್ತಲರನ್ನು ಸೆರೆಮನೆಯಿಂದ ಒಬ್ಬ ದೇವದೂತನು ಹೊರತಂದನು. (ಅಪೊಸ್ತಲರ ಕೃತ್ಯಗಳು 5:19) ದೇವದೂತನು ಫಿಲಿಪ್ಪನನ್ನು ಸಂಧಿಸಿ ಗಾಜಕ್ಕೆ ಹೋಗುವ ದಾರಿಯಲ್ಲಿ ಅಡವಿಯಲ್ಲಿ ಹೋಗಲು ಹೇಳಿ ಐಥಿಯೋಪ್ಯನನ್ನು ಸಂಧಿಸಿ ಅವನೊಂದಿಗೆ ಕ್ರಿಸ್ತನ ಕುರಿತು ಸಾರುವ ಮಾರ್ಗದರ್ಶನ ನೀಡಿದನು. (ಅಪೊಸ್ತಲರ ಕೃತ್ಯಗಳು 8:26) ದೇವದೂತನು ಪೇತ್ರನನ್ನು ಸೆರೆಮನೆಯಿಂದ ಹೊರತಂದನು. (ಅಪೊಸ್ತಲರ ಕೃತ್ಯಗಳು 12:7-11) ದೇವದೂತರು ಇನ್ನೂ ಅನೇಕ ಇತರ ವಿಷಯಗಳನ್ನು ಮಾಡುವುದನ್ನು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಾವು ನೋಡುತ್ತೇವೆ. ದೇವದೂತನು ಕೊರ್ನೇಲ್ಯನನ್ನು ಸಂದರ್ಶಿಸಿ ಪೇತ್ರನನ್ನು ಕರೆಯಿಸಲು ಕಳುಹಿಸಬೇಕು ಎಂಬುದಾಗಿ ಅಪ್ಪಣೆಕೊಟ್ಟನು (ಅಪೊಸ್ತಲರ ಕೃತ್ಯಗಳು 10:3,7,22). ಇದರ ಫಲಿತಾಂಶವಾಗಿ ಸುವಾರ್ತೆಯು ಅನ್ಯರ ಮಧ್ಯದಲ್ಲೂ ಸಾರಲ್ಪಟ್ಟಿತು ಮತ್ತು ಆದಿಸಭೆಯ ಮಾರ್ಗದಲ್ಲಿ ಒಂದು ದೊಡ್ಡ ಬದಲಾವಣೆ ಉಂಟಾಯಿತು. ಕರ್ತನ ದೂತನು ಹೆರೋದನಿಗೆ ಬಡಿದಾಗ ಅವನು ಹುಳಬಿದ್ದು ಸತ್ತನು. (ಅಪೊಸ್ತಲರ ಕೃತ್ಯಗಳು 12:21-23) ದೇವದೂತನು ಪೌಲನಿಗೆ ಹಡಗು ಮುಳುಗುವ ಮೊದಲೇ ಬಿರುಗಾಳಿಯ ಮಧ್ಯದಲ್ಲೇ ಕಾಣಿಸಿಕೊಂಡು ಅವನ ಜೀವದ ಸುರಕ್ಷತೆಯ ಮತ್ತು ಅವನೊಂದಿಗಿದ್ದವರ ಸುರಕ್ಷತೆಯ ಭರವಸೆ ಕೊಟ್ಟನು. (ಅಪೊಸ್ತಲರ ಕೃತ್ಯಗಳು 27:23) ದೇವದೂತರು ನಮಗೆ ಸೇವೆ ಸಲ್ಲಿಸುವ ಇತರ ಮಾರ್ಗಗಳು ಸಹ ಉಂಟು. ದೇವದೂತರು ಮತ್ತು ದೇವದೂತರ ಪ್ರಸನ್ನತೆಯು ಸಹ ನಮ್ಮನ್ನು ರಕ್ಷಿಸುತ್ತವೆ (ಕೀರ್ತನೆಗಳು 91:11) ನಮ್ಮೊಂದಿಗೆ ಕನಸುಗಳಲ್ಲಿ ಮಾತಾಡುತ್ತಾರೆ. (ಮತ್ತಾಯ 1:20) ನಮ್ಮ ಜೀವಿತಗಳಿಗೆ ದೈವಿಕ ಒದಗಿಸುವಿಕೆಯನ್ನು ತರುತ್ತಾರೆ. ಪ್ರಕೃತ್ಯತೀತ ಸ್ವಸ್ಥತೆಗಳಿಗೆ ಕಾರಣವಾಗುತ್ತಾರೆ. (ಯೋಹಾನ 5:4). ದೈಹಿಕ ಸ್ಥಿತಿಗತಿಗಳನ್ನು ಮಾರ್ಪಾಡಿಸುತ್ತಾರೆ (ಲೂಕ 1:18-20) ನಮ್ಮ ದೀಕ್ಷೆ ಮತ್ತು ಶುದ್ಧೀಕರಣದಲ್ಲಿ ಸಹಾಯ ಮಾಡುತ್ತಾರೆ. (ಯೆಶಾಯ 6:6,7). ಇನ್ನೂ ಅತ್ಯಧಿಕವಾದ ಕಾರ್ಯಗಳನ್ನು ದೇವದೂತರು ಮಾಡುತ್ತಾರೆ.

## ತೆರೆದ ಪರಲೋಕವು ಅಂದರೆ ಹೆಚ್ಚಾದ ದರ್ಶನಗಳು, ಪ್ರಕಟನೆಗಳು ಮತ್ತು ದೇವರೊಂದಿಗಿನ ಸಂಧಿಸುವಿಕೆ

**ಕೆಬಾರ್ ನದಿಯ ಹತ್ತಿರ ಸೆರೆಯಾಗಿ ವಾಸಿಸುತ್ತಿದ್ದ ಯೆಹೂದ್ಯರ ಮಧ್ಯದಲ್ಲಿ ನಾನು ಸೇರಿಕೊಂಡಿರುವಾಗ ಮೂವತ್ತನೆಯ ವರುಷದ ನಾಲ್ಕನೆಯ ತಿಂಗಳಿನ ಐದನೆಯ ದಿನದಲ್ಲಿ ಆಕಾಶವು ಒಡೆದು ನನಗೆ ದೇವದರ್ಶನಗಳು ಉಂಟಾದವು** (ಯೆಹೆಜ್ಕೇಲನು 1:1)

**ಆದರೆ ಅವನು ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನು ದೇವರ ಬಲಗಡೆಯಲ್ಲಿ ನಿಂತಿದ್ದ ಯೇಸುವನ್ನೂ ಕಂಡು ಅಗೋ ಆಕಾಶವು ತೆರೆದಿರುವದನ್ನೂ ಮನುಷ್ಯನ ಕುಮಾರನು ದೇವರ ಬಲಗಡೆಯಲ್ಲಿ ನಿಂತಿರುವದನ್ನೂ ನೋಡುತ್ತೇನೆ ಎಂದು ಹೇಳಿದನು.** (ಅಪೊಸ್ತಲರ ಕೃತ್ಯಗಳು 7:55, 56).

**ಮರುದಿನ ಅವರು ಪ್ರಯಾಣಮಾಡಿ ಆ ಊರಿನ ಹತ್ತಿರಕ್ಕೆ ಬರುತ್ತಿರುವಾಗ. ಪೇತ್ರನು ಸುಮಾರು ಮಧ್ಯಾಹ್ನದಲ್ಲಿ ಪ್ರಾರ್ಥನೆ ಮಾಡುವುದಕ್ಕಾಗಿ ಮಾಳಿಗೆಯನ್ನು ಹತ್ತಿದನು. ಅವನು ಬಹಳ ಹಸಿದು ಊಟಮಾಡಬೇಕೆಂದಿದ್ದನು. ಊಟಕ್ಕೆ ಸಿದ್ಧವಾಗುತ್ತಿರುವಷ್ಟರಲ್ಲಿ ಅವನು ಧ್ಯಾನಪರವಶನಾಗಿ ಆಕಾಶವು ತೆರೆದಿರುವುದನ್ನು ನಾಲ್ಕು ಮೂಲೆಗಳನ್ನು ಹಿಡಿದಿದ್ದ ದೊಡ್ಡ ಜೋಳಿಗೆಯಂತಿರುವ ಏನೋ ಒಂದು ವಸ್ತುವು ಭೂಮಿಯ ಮೇಲೆ ಇಳಿಯುವದನ್ನೂ ಕಂಡನು. ಅದರೊಳಗೆ ಸಕಲ ವಿಧವಾದ ಪಶುಗಳೂ ನೆಲದ ಮೇಲೆ ಹರಿದಾಡುವ ಕ್ರಿಮಿಕೀಟಗಳೂ ಅಂತರಿಕ್ಷದಲ್ಲಿ ಹಾರಾಡುವ ಹಕ್ಕಿಗಳೂ ಇದ್ದವು. ಆಗ ಪೇತ್ರನೇ, ಎದ್ದು ಕೊಯ್ದು ತಿನ್ನು ಎಂದು ಅವನಿಗೆ ಒಂದು ವಾಣಿ ಕೇಳಿಸಿತು. ಅದಕ್ಕೆ ಪೇತ್ರನು ಬೇಡವೇ ಬೇಡ ಸ್ವಾಮಿ, ನಾನು ಎಂದೂ ಹೊಲೆ ಪದಾರ್ಥವನ್ನಾಗಲಿ ಅಶುದ್ಧ ಪದಾರ್ಥವನ್ನಾಗಲಿ ತಿಂದವನಲ್ಲ ಅಂದನು. ದೇವರು ಶುದ್ಧಮಾಡಿದ್ದನ್ನು ನೀನು ಹೊಲೆ ಎನ್ನಬೇಡವೆಂದು ತಿರಿಗಿ ಎರಡನೆಯ ಸಾರಿ ಅವನಿಗೆ ವಾಣಿ ಕೇಳಿಸಿತು ಹೀಗೆ ಮೂರುಸಾರಿ ಆಯಿತು. ಆದ ಕೂಡಲೆ ಆ ವಸ್ತುವು ಆಕಾಶದೊಳಗೆ ಸೇರಿಕೊಂಡಿತು. ಪೇತ್ರನು ತನಗಾದ ದರ್ಶನವು ಏನಾಗಿರಬಹುದೆಂದು ತನ್ನಲ್ಲಿ ಕಳವಳಪಡುತ್ತಿರುವಾಗಲೇ ಕೊರ್ನೇಲ್ಯನು ಕಳುಹಿಸಿದ್ದ ಆ ಮನುಷ್ಯರು ಸೀಮೋನನ ಮನೆ ಯಾವದು ಎಂದು ಕೇಳಿಕೊಂಡು ಬಂದು ಆ ಮನೆಯ ಬಾಗಿಲಲ್ಲಿ ನಿಂತು -** (ಅಪೊಸ್ತಲರ ಕೃತ್ಯಗಳು 10:9-17)

**ಇವುಗಳಾದ ಮೇಲೆ ನಾನು ನೋಡಿದಾಗ ಪರಲೋಕದಲ್ಲಿ ತೆರೆದಿದ್ದ ಬಾಗಿಲು ಕಾಣಿಸಿತು: ಮತ್ತು ನನ್ನ ಸಂಗಡ ತುತ್ತೂರಿಯು ಮಾತಾಡುತ್ತದೋ ಎಂಬಂತೆ ನಾನು ಮೊದಲು ಕೇಳಿದ್ದ ವಾಣಿಯು ಕೇಳಿಸಿತು. ಇಲ್ಲಿಗೆ ಏರಿಬಾ, ಮುಂದೆ ಆಗಬೇಕಾದವುಗಳನ್ನು ನಿನಗೆ ತೋರಿಸುವೆನು ಎಂದು ಹೇಳಿತು. ಕೊಡಲೆ ದೇವರಾತ್ಮವಶನಾದೆನು. ಆಗ ಇಗೋ, ಪರಲೋಕದಲ್ಲಿ ಒಂದು ಸಿಂಹಾಸನವಿತ್ತು. ಸಿಂಹಾಸನದ ಮೇಲೆ ಒಬ್ಬನು ಕೂತಿದ್ದನು.** (ಪ್ರಕಟನೆ 4:1,2)

**ಪರಲೋಕವು ತೆರೆದಿರುವುದನ್ನು ನಾನು ಕಂಡೆನು. ಆಗ ಇಗೋ, ಬಿಳೀ ಕುದುರೆಯು ನನಗೆ ಕಾಣಿಸಿತು; ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು ಆತನು ನೀತಿಯಿಂದ ನ್ಯಾಯವಿಚಾರಿಸುತ್ತಾನೆ ನೀತಿಯಿಂದ ಯುದ್ಧ ಮಾಡುತ್ತಾನೆ.** (ಪ್ರಕಟನೆ 19:11)

ಪರಲೋಕಗಳು ತೆರೆದಿರುವಾಗ ಭೂಮಿಯ ಮೇಲೆ ಜನರು ದರ್ಶನಗಳನ್ನು ಪ್ರಕಟನೆಗಳನ್ನು ದೇವರೊಂದಿಗೆ ಸಂಧಿಸುವಿಕೆಗಳನ್ನು ಅನುಭವಿಸುತ್ತಾರೆ ಎಂಬುದಾಗಿ ಅನೇಕ ಸ್ಥಳಗಳಲ್ಲಿ, ಸತ್ಯವೇದ ವಾಕ್ಯವು ನಮಗೆ ತೋರಿಸುತ್ತದೆ. ಪೌಲನು ಸಹ ಮೂರನೆಯ ಆಕಾಶದ ಪರಿಯಂತರಕ್ಕೂ ಒಯ್ಯಲ್ಪಟ್ಟನು, ಮತ್ತು ಪರದೈಸಕ್ಕೂ ಒಯ್ಯಲ್ಪಟ್ಟನು, ಹೇಳಬಾರದ ಮಾತುಗಳನ್ನು ಕೇಳಿದನೆಂದು ಹಂಚಿಕೊಳ್ಳುತ್ತಾನೆ. (2 ಕೊರಿಂಥದವರಿಗೆ 12:1-4) ಸುರಿಸುವಿಕೆ ಮತ್ತು ಸಂದರ್ಶನದ ಸುಸಮಯದಲ್ಲಿ ಯಾವಾಗ ದೇವ ಜನರು ತೆರೆದ ಪರಲೋಕದ ಕೆಳಗಿರುತ್ತಾರೋ ಅಲ್ಲಿ ದೇವಜನರ ಮಧ್ಯದಲ್ಲಿ ಅತೀ ಹೆಚ್ಚಾದ ದರ್ಶನಗಳು ಮತ್ತು ಪ್ರಕಟನೆಗಳು ಮತ್ತು ಕನಸುಗಳಿರುತ್ತವೆ. ಸಾಮಾನ್ಯವಾಗಿ ದರ್ಶನಗಳ, ಪ್ರಕಟನೆಗಳ ಅನುಭವವನ್ನು ಪಡೆಯದವರೂ ಅಂತಹ ಅನುಭವಗಳನ್ನು ಪಡೆಯಲು ಪ್ರಾರಂಭಿಸುತ್ತಾರೆ. ಇದು ಅನೇಕರಿಗೆ ಪ್ರಕಟನೆಯುಕ್ತ ವರವಾದ ಜ್ಞಾನದ ವಚನಗಳು, ತಿಳುವಳಿಕೆಯ ವಚನಗಳು ಮತ್ತು ಆತ್ಮನ ಗ್ರಹಿಸುವಿಕೆಗಳು ಸುಲಭವಾಗಿ ಸಿಗುತ್ತವೆ. ಕೆಲವು ಪ್ರಕಟನೆಗಳು ಜೀವಿತವನ್ನು ಬದಲಾಯಿಸುವ, ಅಪೇಕ್ಷೆಗಳನ್ನು ಮಾರ್ಪಾಡುಗೊಳಿಸುವ ಹೊಸ ಸೇವೆಗಳನ್ನು ಬಿಡುಗಡೆಗೊಳಿಸುವವುಗಳಾಗಿರುತ್ತವೆ.

## ತೆರೆದ ಪರಲೋಕಗಳು ಅಂದರೆ ಉತ್ತರಿಸಲ್ಪಟ್ಟ ಪ್ರಾರ್ಥನೆ

**ದಾವೀದನ ಮಗನೂ ಇಸ್ರಾಯೇಲ್ಯರ ಅರಸನೂ ಆದ ಸೊಲೊಮೋನನ ಕಾಲದಿಂದ ಯೆರೂಸಲೇಮಿನಲ್ಲಿ ಅಂಥ ಉತ್ಸವವು ನಡೆದಿರಲಿಲ್ಲವಾದ್ದರಿಂದ ಯೆರೂಸಲೇಮಿನಲ್ಲಿ ಬಹುಸಂತೋಷವುಂಟಾಯಿತು. ಆಮೇಲೆ ಯಾಜಕರಾಗಿದ್ದ ಲೇವಿಯರು ಎದ್ದುನಿಂತು ಜನರನ್ನು ಆಶೀರ್ವದಿಸಿದರು. ಅವರ ಸ್ವರವು (ದೇವರಿಗೆ) ಕೇಳಿಸಿತು. ಅವರ ಪ್ರಾರ್ಥನೆಯು ಪರಲೋಕದಲ್ಲಿರುವ ಆತನ ಪರಿಶುದ್ಧ ನಿವಾಸಕ್ಕೆ ಮುಟ್ಟಿತು.** (2 ಪೂರ್ವಕಾಲವೃತ್ತಾಂತ 30:26,27)

ಎಲ್ಲಾ ಸಮಯದಲ್ಲೂ ದೇವರು ಪ್ರಾರ್ಥನೆ ಕೇಳುತ್ತಾನೆ ಮತ್ತು ಉತ್ತರ ಕೊಡುತ್ತಾನೆ ಎಂಬುದು ನಮಗೆ ಗೊತ್ತಿದೆ. ಹಾಗಿದ್ದರೂ ಪರಲೋಕವು ತೆರೆದ ಸುಸಮಯದಲ್ಲಿ ಇಸ್ರಾಯೇಲ್‌ನಲ್ಲಿ ಹಿಜ್ಕೀಯನ ಆಳ್ವಿಕೆಯ ಅವಧಿಯ ಉಜ್ಜೀವನದ ಅವಧಿಯಲ್ಲಿನ ಅನುಭವದಂತೆ ಪ್ರಾರ್ಥನೆಗಳಿಗೆ ಉತ್ತರವು ಸುಲಭವಾಗಿ ಮತ್ತು ಅತೀಬೇಗನೆ ದೊರೆತವು. ಇದು ದಾನಿಯೇಲನು ಪರಲೋಕದ ಉತ್ತರ ಪಡೆಯುವ ಇಪ್ಪತ್ತೊಂದು ದಿನಗಳು ಅತೀವ ಪ್ರಾರ್ಥನೆ ಮತ್ತು ಕಾಯುವಿಕೆಯಲ್ಲಿ ಹಾದುಹೊಗಿದ್ದಕ್ಕೆ ವ್ಯತಿರಿಕ್ತವಾಗಿದೆ. (ದಾನಿಯೇಲನು 10:1-13) ಪೈಶಾಚಿಕ ನಿರ್ಬಂದಗಳು ಉತ್ತರವನ್ನು ಅತ್ಯಂತ ವಿಳಂಬ ಮಾಡುತ್ತವೆ ಮತ್ತು ದೇವದೂತರು ಮಹಾ ಉತ್ತರಗಳೊಡನೆ ಅತೀ ಬೇಗನೆ ಬರುತ್ತಾರೆ.

# 3

# ಪರಲೋಕವು ತೆರೆಯಲು ಏನು ಕಾರಣವಾಗುತ್ತದೆ?

ನಮ್ಮ ನಗರ, ಸಮುದಾಯ ಅಥವಾ ಪ್ರದೇಶದ ಮೇಲೆ ಪರಲೋಕವು ತೆರೆಯುವುದನ್ನು ನೋಡಲು ನಾವು ಮಾಡಬಹುದಾದದ್ದು ಏನಾದರೂ ಇದೆಯೇ? ಹಾಗಿದ್ದರೆ, ಇದು ಏನಾಗಿರಬಹುದು?

ಕೆಲವು ಸಂದರ್ಭಗಳಲ್ಲಿ ಪರಮಾಧಿಕಾರಿಯಾದ ದೇವರು ಯಾರೂ ಸಹ ನಿರೀಕ್ಷಿಸದೆ ಇರುವಾಗ, ಪರಲೋಕವನ್ನು ಸೀಳಿ ಕೆಳಗೆ ಬರುವಾಗ, ಮತ್ತು ಅದನ್ನು ದೇವ ಜನರು ಪರಲೋಕವು ತೆರೆದಿರುವುದನನ್ನು ಕಾಣಲು ಮಾಡಬೇಕಾದ ಅನೇಕ ವಿಷಯಗಳಿವೆ ಎಂಬುದನ್ನು ಸತ್ಯವೇದದ ವಾಕ್ಯಗಳು ಮತ್ತು ಇತಿಹಾಸವು ನಮಗೆ ಬೋಧಿಸುವಂತಹದ್ದು ಸತ್ಯವಾಗಿದೆ.

## ದೇವರನ್ನು ತೀಕ್ಷ್ಣವಾಗಿ ಹುಡುಕುವುದು

**ಅವರು ಯೆಹೋವನ ಕಡೆಗೆ ಹಿಂದಿರುಗಿ ಹೋಗೋಣ ಬನ್ನಿರಿ ನಮ್ಮನ್ನು ಸೀಳಿಬಿಟ್ಟವನು ಆತನೇ, ಆತನೇ ಸ್ವಸ್ಥಮಾಡುವನು; ಹೊಡೆದವನು ಆತನೇ; ಆತನೇ ನಮ್ಮ ಗಾಯಗಳನ್ನು ಕಟ್ಟುವನು. ಒಂದೆರಡು ದಿನದ ಮೇಲೆ ಆತನು ನಮ್ಮನ್ನು ಬದುಕಿಸುವನು; ಮೂರನೆಯ ದಿನದಲ್ಲಿ ಆತನು ನಮ್ಮನ್ನೆಬ್ಬಿಸಲು ಆತನ ಸಾನ್ನಿಧ್ಯದಲ್ಲಿ ಬಾಳುವೆವು, ಯೆಹೂವನನ್ನು ತಿಳಿದುಕೊಳ್ಳೋಣ ಹುಡುಕಿ ಹುಡುಕಿ ತಿಳಿದುಕೊಳ್ಳೋಣ; ಆತನ ಆಗಮನವು ಉದಯದಂತೆ ನಿಶ್ಚಯ; ಆತನು ಮುಂಗಾರಿನಂತೆಯೂ ಭೂಮಿಯನ್ನು ತಂಪುಮಾಡುವ ಹಿಂಗಾರಿನಂತೆಯೂ ನಮಗೆ ಸಿಕ್ಕುವನು (ಅಂದುಕೊಂಡು ನನ್ನನ್ನು ಮರೆ ಹೋಗುವರು)**. (ಹೋಶೇಯ 6:1-3)

ದೇವ ಜನರಾಗಿ ನಾವು, ದೇವರ ಬಳಿಗೆ ಹಿಂದಿರುಗಿ ಕರ್ತನನ್ನು ಹುಡುಕಿದರೆ ಆಗ ಆತನು ನಮ್ಮ ಬಳಿಗೆ ಮಳೆಯ ರೂಪದಲ್ಲಿ ಬರುತ್ತಾನೆಂಬುದಾಗಿ ಸತ್ಯವೇದದ ವಚನಗಳು ನಮಗೆ ಭರವಸೆಕೊಡುತ್ತವೆ. ಆಗ ನಮ್ಮ ಮೇಲೆ ದೇವರ ಪ್ರಸನ್ನತೆಯ ಮತ್ತು ಬಲದ ಸುರಿಸುವಿಕೆಯಿರುತ್ತದೆ.

ನಮ್ಮ ಶ್ರದ್ಧೆಯ ದೇವರ ಹುಡುಕುವಿಕೆ, ದೇವರಿಗಾಗಿ ಆಳವಾದ ಹಸಿವು, ಬಯಕೆ, ಪಶ್ಚಾತ್ತಾಪ, ದೀಕ್ಷೆ, ದೇವರಿಗೆ ಸಮರ್ಪಣೆ ಮತ್ತು ಆತನನ್ನು ಹುಡುಕಲು ವಿಸ್ತಾರಗೊಂಡ

ಸಮಯಗಳ ಮೂಲಕವಾಗಿ ವ್ಯಕ್ತವಾಗುತ್ತದೆ. ಬಾಯಾರಿದ ಜಿಂಕೆಯು ನೀರಿಗಾಗಿ ಹಾತೊರೆಯುವಂತೆ ನಮ್ಮ ಹೃದಯಗಳು ದೇವರಿಗಾಗಿ ಹಸಿವುಗೊಂಡಿರಬೇಕು (ಕೀರ್ತನೆ 42:1,2) ಇತಿಹಾಸವು, ದೇವರನ್ನು ಹುಡುಕಿ ಶ್ರದ್ಧೆಯಿಂದ ಪ್ರಾರ್ಥಿಸಿ ಸ್ತೋತ್ರ ಆರಾಧನೆ ಮತ್ತು ಕರ್ತನ ಪ್ರಸನ್ನತೆಯಲ್ಲಿರಲು ಅಪೇಕ್ಷಿಸಿ ಕರ್ತನ ಪ್ರಬಲ ಸಂದರ್ಶನವನ್ನು ಅನುಭವಿಸಿದ ವೈಯಕ್ತಿಕ ಮತ್ತು ವಿಶ್ವಾಸಿಗಳ ಗುಂಪುಗಳ ಬಲಯುತವಾದ ಸಾಕ್ಷಿಗಳಿಂದ ತುಂಬಿದೆ. ದೇವರ ಸಂದರ್ಶನ ನೋಡಲು ಮತ್ತು ಇಂತಹ ಉದ್ದೇಶಗಳಿಗಾಗಿ ಯಾವುದೇ ಪ್ರದೇಶದಲ್ಲಿರುವ ಸಭೆಯು ಏಕೆ ಆತನ ಸಂದರ್ಶನವನ್ನು ಮಾಡಬಾರದೆಂಬುದಕ್ಕೆ, ಪಡೆಯಬಾರದು ಎಂಬುದಕ್ಕೆ ಯಾವುದೇ ಕಾರಣಗಳಿಲ್ಲ,

ಅಂತಿಮವಾಗಿ ದೇವರನ್ನು ಅತ್ಯಾಸಕ್ತಿಯಿಂದ ಹುಡುಕಿ ಆತನ ಪ್ರಸನ್ನತೆಯನ್ನು ಹುಡುಕುವುದು ನಮ್ಮ ಆಯ್ಕೆಯಾಗಿದೆ ಮತ್ತು ನಾವು ಹುಡುಕಿದಾಗ ಆತನು ನಮ್ಮ ಬಳಿಗೆ ಬರುತ್ತಾನೆ ಎಂಬುದಾಗಿ ದೇವರು ವಾಗ್ದಾನ ಮಾಡಿದ್ದಾನೆ. ನಾವು ಆತನ ಸಮೀಪಕ್ಕೆ ಬರುವಾಗ, ಆತನು ನಮ್ಮ ಸಮೀಪಕ್ಕೆ ಬರುತ್ತಾನೆ. (ಯಾಕೋಬನು 4:8)

ಚಾರ್ಲ್ಸ್ ಫಿನ್ನೆರವರು ''ಯಾವಾಗ ಪರಾಕ್ರಮದ ಅಂತರಾತ್ಮ ಅಥವಾ ಪ್ರಾಣಗಳು ಜಯಿಸು ಅಥವಾ ಗತಿಸು ಎಂಬ ನಿರ್ಣಯಕ ಹೋರಾಟಕ್ಕೆ ಪ್ರವೇಶಿಸುತ್ತೇವೋ ಆಗ ಪರಲೋಕದಿಂದ ಉಜ್ಜೀವನ ಬರುತ್ತದೆ'', ಎಂಬುದಾಗಿ ಹೇಳಿದ್ದಾರೆ! ''ಪರಲೋಕ ರಾಜ್ಯವು ಬಲಾತ್ಕಾರಕ್ಕೆ ಒಳಗಾಗಿದೆ, ಮತ್ತು ಬಲಾತ್ಕಾರಿಗಳು ಅದನ್ನು ಬಲಾತ್ಕಾರದಿಂದ ಸ್ವಾಧೀನ ಮಾಡಿಕೊಳ್ಳುತ್ತಾರೆ''.

## ದೇವಜನರ ಮಧ್ಯದಲ್ಲಿ ಐಕ್ಯತೆ

**ಆಹಾ, ಸಹೋದರರು ಒಂದಾಗಿರುವುದು ಎಷ್ಟೋ ಒಳ್ಳೇದು, ಎಷ್ಟೋ ರಮ್ಯವಾದದ್ದು! ಅದು ಆರೋನನ ತಲೆಯ ಮೇಲೆ ಹಾಕಲ್ಪಟ್ಟು ಅವನ ಗಡ್ಡದ ಮೇಲೆಯೂ ಅಲ್ಲಿಂದ ಅವನ ಅಂಗಿಗಳ ಕೊರಳಪಟ್ಟಿಯವರೆಗೂ ಹರಿದುಬರುವ ಶ್ರೇಷ್ಟ ತೈಲದಂತೆಯೂ ಹೆರ್ಮೋನ್ ಪರ್ವತದಲ್ಲಿ ಹುಟ್ಟಿ ಚೀಯೋನ್ ಪರ್ವತದ ಮೇಲೆ ಬೀಳುವ ಮಂಜಿನಂತೆಯೂ ಇದೆ. ಅಲ್ಲಿ ಆಶೀರ್ವಾದವೂ ಜೀವವೂ ಸದಾಕಾಲ ಇರಬೇಕೆಂದು ಯೆಹೋವನು ಆಜ್ಞಾಪಿಸಿದ್ದಾನೆ.** (ಕೀರ್ತನೆಗಳು 133:1-3)

ಅಂತಹ ಪ್ರದೇಶದಲ್ಲಿ ದೇವರ ಜನರ ಮಧ್ಯದಲ್ಲಿ ನಿಜವಾದ ಐಕ್ಯತೆಯ ವಾತಾವರಣವಿರುವುದು ಸುರಿಸುವಿಕೆಯ ಮುನ್ಸೂಚಕವಾಗಿರುತ್ತದೆ. ನಾವು ಸ್ವಾರ್ಥದ

ಹೆಬ್ಬಯಕೆ, ಸಂದೇಹ ಮತ್ತು ಸ್ಪರ್ಧೆಗಳನ್ನು ತೆಗೆದುಬಿಡಬೇಕು. ಸ್ವಾರ್ಥದ ಹೆಬ್ಬಯಕೆಯು ಸಂದೇಹಕ್ಕೆ ನಡೆಸುತ್ತದೆ, ಮತ್ತು ಸಂದೇಹವು ಸ್ಪರ್ಧೆಗಳಿಗೆ ಅವಕಾಶ ಕಲ್ಪಿಸುತ್ತದೆ ಮತ್ತು ಸ್ಪರ್ಧೆಗಳು ವಿಭಾಗಗಳ ಕಡೆಗೆ ನಡೆಸುತ್ತದೆ.

ದೇವರನ್ನು ಹುಡುಕಬೇಕೆಂಬ ಒಂದೇ ಉದ್ದೇಶದಿಂದ ಹೆಸರನ್ನು ಗಣನೆಗೆ ತೆಗೆದುಕೊಳ್ಳದೆ, ವರ್ಗೀಕರಣ, ಸಿದ್ಧಾಂತಗಳ ವ್ಯತ್ಯಾಸಗಳು, ಕ್ಷುಲ್ಲಕ ಕಚ್ಚಾಟಗಳನ್ನು ತ್ಯಜಿಸಿಬಿಟ್ಟು- ದೇವಜನರೆಲ್ಲರು ಐಕ್ಯತೆಯಲ್ಲಿ ಸೇರಿಬರುವಾಗ ಅಲ್ಲಿ ಆತನ ಆತ್ಮದ ಪ್ರಸನ್ನತೆಯ ಮತ್ತು ಬಲದ ಸುರಿಸುವಿಕೆಯಿರುತ್ತದೆ. ಅಲ್ಲಿ ಅಭಿಷೇಕ ಉಲ್ಲಾಸ ಆಶೀರ್ವಾದ ಮತ್ತು ತಲೆಯಿಂದ ಅಂಗಾಲಿನ ಕಾಲು ಬೆರಳಿನವರೆಗೆ ಅವರಲ್ಲಿನ ದೊಡ್ಡವರಿಂದ ಅತೀ ಚಿಕ್ಕವನವರೆಗೂ ಎಲ್ಲರ ಮೇಲೂ ಸುರಿಸುವಿಕೆಯಿರುತ್ತದೆ.

ಇದು ನೂರಿಪ್ಪತ್ತು (120) ಶಿಷ್ಯರ ವಿಷಯದಲ್ಲಿ ಅತೀ ಸತ್ಯವಾದುದಾಗಿತ್ತು. ಸುರಿಸುವಿಕೆಯ ವಾಗ್ದಾನವು ಕೊಡಲ್ಪಟ್ಟಿತ್ತು (ಅಪೊಸ್ತಲರ ಕೃತ್ಯಗಳು 1:5, 8) ‘‘ಅವರೆಲ್ಲರು ಏಕಮನಸ್ಸಾಗಿ ಪ್ರಾರ್ಥನೆ ಮತ್ತು ವಿಜ್ಞಾಪನೆಯಲ್ಲಿ ಮುಂದುವರೆದರು’’ ಎಂಬುದಾಗಿ ಸತ್ಯವೇದವು ನಮಗೆ ತಿಳಿಸುತ್ತದೆ. (ಅಪೊಸ್ತಲರ ಕೃತ್ಯಗಳು 1:14). ಅವರು ಐಕ್ಯತೆಯನ್ನು ನಡೆಸಿಕೊಂಡು ಬರುವಾಗ ಮತ್ತು ನಿರಂತರ ಪ್ರಾರ್ಥನೆ ಮಾಡುವಾಗ ಅವರು ಆತ್ಮನ ಸುರಿಸುವಿಕೆಯನ್ನು ಪಡೆಯುವ ಸ್ಥಾನದಲ್ಲಿದ್ದರು.

ದೇವರಿಗಾಗಿ ನಮ್ಮ ನಗರದಲ್ಲಿ ಎಲ್ಲಾ ವೈಯಕ್ತಿಕ ಕಾರ್ಯ ಸೂಚಿಪತ್ರಗಳನ್ನು ಬದಿಗೊತ್ತಿ ನಮ್ಮ ನಗರದ ಎಲ್ಲಾ ಸಭೆಗಳಲ್ಲಿ ಉಜ್ಜೀವನವು ಪರಿಣಾಮ ಬೀರಬೇಕು, ಸುರಿಸುವಿಕೆ, ಸಂದರ್ಶನ, ತೆರೆದ ಪರಲೋಕಕ್ಕಾಗಿ ದೇವರನ್ನು ಹುಡುಕಲು ಒಟ್ಟಾಗಿ ಸೇರಿಬರುವ ಸಂದೇಶಕರು, ಸುವಾರ್ತಸೇವಕರು, ಸಭಾಪಾಲಕರು ಮತ್ತು ವಿಶ್ವಾಸಿಗಳನ್ನು ನಮ್ಮ ನಗರ ಹೊಂದಿರುವುದಾದರೆ! ಕ್ರಿಸ್ತ ಸಾರೂಪ್ಯದಲ್ಲಿ ಜನರನ್ನು ಪ್ರೀತಿಸುವ ನಾಯಕರು ಅಂತಹ ದೇವರ ರಾಜ್ಯದ ಮನಸ್ಸುಳ್ಳವರು ಎಲ್ಲಿ? ಆತನ ಸಭೆಗಾಗಿ ಮತ್ತು ಆತನ ರಾಜ್ಯಕ್ಕೆ, ಕರ್ತರ ಕರ್ತನಿಗೆ, ರಾಜಾಧಿರಾಜನಿಗೆ ರಾಜಭಕ್ತಿ ತೋರುವ ಮತ್ತು ಸಭೆಯ ಲಾಂಛನದಡಿಯಲ್ಲಿ ಭಿನ್ನಾಭಿಪ್ರಾಯ ಹುಟ್ಟಿಸುವ ನಿಷ್ಠೆಗಳನ್ನು ಹೊರಗಡೆ ಹಾಕಿ ವರ್ಗೀಕರಣ ವ್ಯವಸ್ಥೆಗಳಿಂದ ಹೊರಬಂದಿರುವಂತಹ ವಿಶ್ವಾಸಿಗಳು ಎಲ್ಲಿದ್ದಾರೆ? ನಮ್ಮ ನಗರದ ಮೇಲೆ ಪರಲೋಕವು ತೆರೆಯಲು ದೇವರನ್ನು ಹುಡುಕಲು ಒಟ್ಟಾಗಿ ನಾವು ಸೇರಿಬರೋಣವೇ?

## ಅತ್ಯಾಸಕ್ತಿಯುಳ್ಳ ಪ್ರಾರ್ಥನೆ

**ನೀತಿವಂತನ ಅತ್ಯಾಸಕ್ತಿಯುಳ್ಳ ವಿಜ್ಞಾಪನೆಯು ಬಹು ಬಲವಾಗಿದೆ ಎಲೀಯನು ನಮ್ಮಂಥ ಸ್ವಭಾವವುಳ್ಳವನಾಗಿದ್ದನು. ಅವನು ಮಳೆ ಬರಬಾರದೆಂದು ಬಹಳವಾಗಿ ಪ್ರಾರ್ಥಿಸಲು ಮೂರುವರುಷ ಆರು ತಿಂಗಳವರೆಗೂ ಮಳೆಬೀಳಲಿಲ್ಲ. ತಿರಿಗಿ ಅವನು ಪ್ರಾರ್ಥನೆ ಮಾಡಲು ಆಕಾಶವು ಮಳೆಗರೆಯಿತು, ಭೂಮಿಯು ಬೆಳೆಯಿತು** (ಯಾಕೋಬನು 5:16-18).

ಆತನ ಜನರ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಗೆ ದೇವರು ಪ್ರತಿಕ್ರಿಯೆ ತೋರಿಸುತ್ತಾನೆ. ಎಲೀಯನು ಸ್ವಾಭಾವಿಕ ಮಳೆಗಾಗಿ ಪ್ರಾರ್ಥಿಸಿ ಅದು ಜರುಗಿದ್ದನ್ನು ನೋಡಿದಂತಹ ಒಂದು ಶ್ರೇಷ್ಟ ಉದಾಹರಣೆ ನಾವು ಹೊಂದಿದ್ದೇವೆ. (1 ಅರಸುಗಳು 18:41-46). ಅವನು ಸಮೃದ್ಧಿಕರವಾದ ಶಬ್ಧದಿಂದ ಕೂಡಿದ ಮಳೆ ಬರುತ್ತದೆ ಎಂಬುದಾಗಿ ಘೋಷಣೆ ಮಾಡಿ ಪ್ರಾರ್ಥನಾ ಸಮಯಕ್ಕೆ ಹೋರಟನು. ಅವನು ಪ್ರಾರ್ಥನೆಯಲ್ಲಿ ಎಷ್ಟು ಸಮಯ ಕಳೆದನು ಎಂಬುದಕ್ಕೆ ನಮಗೆ ಸೂಚನೆಗಳಿಲ್ಲ. ಆರು ಬಾರಿ ಅವನು ಪ್ರಾರ್ಥನೆಯ ಉತ್ತರದ ಸೂಚನೆಗಳನ್ನು ಎದುರುನೋಡಿದನು. ಮತ್ತು ಅಲ್ಲಿ ಸ್ವಲ್ಪವೂ ಮಳೆಯಾಗಲಿಲ್ಲ! ಹಾಗಿದ್ದರೂ, ಅವನು ಸುಮ್ಮನೆ ಇರಲಿಲ್ಲ ಮತ್ತು ಅವನ ಪ್ರಾರ್ಥನೆಯನ್ನು ಬಿಟ್ಟು ಕೊಡಲಿಲ್ಲ. ಅದು ತೋರುವುದನ್ನು ನೋಡುವವರೆಗೂ ಏಳನೇ ಬಾರಿಯು ಮುಂದುವರೆದನು. ಆದರೆ ಮಳೆಯು ಅದರ ಮಾರ್ಗದಲ್ಲಿರುವ ಒಂದು ಚಿಕ್ಕ ಸೂಚನೆಯುಂಟಾಯಿತು ಮತ್ತು ಖಚಿತವಾಗಿ ಸಾಕಾಗುವಷ್ಟು ಮಳೆಯು ಬಂತು! ಪರಲೋಕವು ತೆರೆಯುವುದನ್ನು ನೋಡುವಂತಹ ಇಂತಹ ಬಗೆಯ ಪ್ರಾರ್ಥನೆಯು ನಮಗೆ ಅಗತ್ಯ. ಪರಲೋಕಗಳು ತೆರೆಯುವುದಕ್ಕೆ ಯಾವುದೇ ಸೂಚನೆಗಳು ಕಾಣಿಸದೇ ಇರುವಾಗಲೂ ಪ್ರಾರ್ಥನೆಯನ್ನು ಬಿಟ್ಟುಕೊಡುವುದಲ್ಲ. ಉತ್ಸಾಹವುಳ್ಳ ಪ್ರಾರ್ಥನೆ! ಆಸಕ್ತಿಯುಳ್ಳ ಪ್ರಾರ್ಥನೆ! ಪಟ್ಟು ಹಿಡಿದು ಮಾಡುವ ಪ್ರಾರ್ಥನೆಯು ಬೇಕು. ಮಳೆಬೀಳುವವರೆಗೂ ಬಿಟ್ಟುಕೊಡದ ಅತ್ಯಾಸಕ್ತಿಯುಳ್ಳ ಪ್ರಾರ್ಥನೆಯು ಬೇಕು!

ಪರಲೋಕಗಳು ತೆರೆಯುವಂತೆ ಪ್ರಾರ್ಥಿಸಲು ನಮಗೆ ಪ್ರೋತ್ಸಾಹಪಡಿಸುವಂತಹ ಇನ್ನೂ ಹೆಚ್ಚು ಸತ್ಯವೇದದ ವಚನಭಾಗಗಳು ಇಲ್ಲಿವೆ.

**"ನಾನು ಆಕಾಶವನ್ನು ಮಳೆಗರೆಯುವಂತೆ ಮುಚ್ಚುವಾಗಲೂ ದೇಶವನ್ನು ತಿಂದುಬಿಡುವುದಕ್ಕೆ ಮಿಡತೆಗಳನ್ನು ಕಳುಹಿಸುವಾಗಲೂ ನನ್ನ ಪ್ರಜೆಯ ಮೇಲೆ ಘೋರ ವ್ಯಾಧಿಯನ್ನು ಬರಮಾಡುವಾಗಲೂ ನನ್ನವರೆಂದು ಹೆಸರುಗೊಂಡ ನನ್ನ ಪ್ರಜೆಗಳು ತಮ್ಮನ್ನು ತಗ್ಗಿಸಿಕೊಂಡು ತಮ್ಮ ಕೆಟ್ಟನಡತೆಯನ್ನು ಬಿಟ್ಟು ತಿರುಗಿಕೊಂಡು**

**ನನ್ನನ್ನು ಪ್ರಾರ್ಥಿಸಿ ನನ್ನ ದರ್ಶನವನ್ನು ಬಯಸುವುದಾದರೆ ನಾನು ಪರಲೋಕದಿಂದ ಲಾಲಿಸಿ ಅವರ ಪಾಪಗಳನ್ನು ಕ್ಷಮಿಸಿ ಅವರ ದೇಶದಲ್ಲಿ ಆರೋಗ್ಯವನ್ನು ದಯಪಾಲಿಸುವೆನು.** (2 ಪೂರ್ವಕಾಲವೃತ್ತಾಂತ 7:13-14)

**ಸೇನಾಧೀಶ್ವರನಾದ ದೇವರೇ, ಅಭಿಮುಖನಾಗಬೇಕು: ನೀನು ಪರಲೋಕದಿಂದ ಕಟಾಕ್ಷಿಸಿ ಈ ದ್ರಾಕ್ಷಾಲತೆಯನ್ನು ಪರಾಂಬರಿಸು ನಿನ್ನ ಬಲಗೈ ನೆಟ್ಟು ಸಾಕಿ ಬೆಳಸಿದ ಸಸಿಯನ್ನು ಕಾಪಾಡು.** (ಕೀರ್ತನೆಗಳು 80:14,15)

**ಯೆಹೋವನೇ, ಆಕಾಶವನ್ನು ತಗ್ಗಿಸಿ ಇಳಿದು ಬಾ; ಪರ್ವತಗಳನ್ನು ಮುಟ್ಟು ಆಗ ಅವು ಹೊಗೆ ಹಾಯುವುದು** (ಕೀರ್ತನೆಗಳು 144:5)

**ಆಹಾ, ನೀನು ಆಕಾಶವನ್ನು ಸೀಳಿ ಇಳಿದು ಬರಬಾರದೇ ನಿನ್ನ ದರ್ಶನವು ಉಂಟಾಗಿ ಪರ್ವತಗಳು ಅಲುಗಿದರೆ ಎಷ್ಟೋ ಒಳ್ಳೇದು! ಒಣಗಿಡಕ್ಕೆ ಹತ್ತುವ ಕಿಚ್ಚಿನ ಪ್ರಕಾರವೂ ನೀರನ್ನು ಕುದಿಸುವ ಉರಿಯೋಪಾದಿಯಲ್ಲಿಯೂ (ನೀನು ಪ್ರತ್ಯಕ್ಷನಾಗಿ) ನಮ್ಮ ನಿರೀಕ್ಷೆಗೆ ಮೀರಿದ ಭಯಂಕರಕೃತ್ಯಗಳನ್ನು ನಡಿಸಿ ನಿನ್ನ ಮಹತ್ತನ್ನು ನಿನ್ನ ಶತ್ರುಗಳಿಗೆ ತಿಳಿಯಪಡಿಸಿ ಜನಾಂಗಗಳನ್ನು ನಿನ್ನ ದರ್ಶನದಿಂದ ನಡುಗಿಸಬಾರದೇ! ಹೌದು, ನೀನು ಇಳಿದು ಬಂದು ಪರ್ವತಗಳು ನಿನ್ನ ದರ್ಶನದಿಂದ ಅಲುಗಿದರೆ ಎಷ್ಟೋ ಲೇಸು! ನಿನ್ನನ್ನು ಬಿಟ್ಟರೆ ನಿರೀಕ್ಷಿಸುವವನಿಗೆ ಕಾರ್ಯಕರ್ತನಾದ ಯಾವ ದೇವರನ್ನೂ ಆದಿಯಿಂದ ಯಾರೂ ಕೇಳಲಿಲ್ಲ, ಯಾರ ಕಿವಿಗೂ ಬೀಳಲಿಲ್ಲ, ಯಾರ ಕಣ್ಣು ಕಾಣಲಿಲ್ಲ** (ಯೆಶಾಯ 64:1-4)

**ಮಳೆಯಾಗುವಂತೆ ಹಿಂಗಾರಿನಲ್ಲಿ ಯೆಹೋವನನ್ನು ಬೇಡಿಕೊಳ್ಳಿರಿ; ಯೆಹೋವನೇ ಮಿಂಚುಗಳನ್ನು ಉಂಟುಮಾಡುತ್ತಾನೆ. ಮನುಷ್ಯರಿಗೆ ಸಮೃದ್ಧಿಯಾದ ಮಳೆಯನ್ನು ದಯಪಾಲಿಸುತ್ತಾನೆ. ಎಲ್ಲರಿಗೂ ಹೊಲದ ಪೈರನ್ನು ಅನುಗ್ರಹಿಸುತ್ತಾನೆ.** (ಜೆಕರ್ಯ 10:1).

## ನಂಬಿಕೆ ಮತ್ತು ನಿರೀಕ್ಷೆ

ನಾವು ದೇವರನ್ನು ಹಿಂಬಾಲಿಸುವಾಗ ಮತ್ತು ಒಟ್ಟಾಗಿ ಪ್ರಾರ್ಥಿಸುವಾಗ ಅಲ್ಲಿ ಉನ್ನತವಾದ ನಂಬಿಕೆಯ ಪ್ರಜ್ಞೆಯಿರುತ್ತದೆ ಮತ್ತು ದೇವರ ಪ್ರಸನ್ನತೆ ಮತ್ತು ಬಲದ ತೋರ್ಪಡಿಸುವಿಕೆಯ ನಿರೀಕ್ಷೆಯಿರುತ್ತದೆ. ಭೂಮಿಯನ್ನು ಉಳುಮೆಮಾಡಿ, ಬೀಜವನ್ನು ನಿರೀಕ್ಷೆಯಿಂದ ಬಿತ್ತಿ ಮಳೆಯಾಗುತ್ತದೆ ಎಂಬುದಾಗಿ ಸಂಪೂರ್ಣ ನಿರೀಕ್ಷಿಸುವ ರೈತನ ರೀತಿಯಲ್ಲಿರುವರು ನಾವಾಗಿದ್ದೇವೆ. ನಾವು ನೋಡಲು ಪ್ರಾರಂಭಿಸಿದ ಆತನ ಪ್ರಸನ್ನತೆ ಮತ್ತು ಬಲದ ಪ್ರತಿಯೊಂದು ಹನಿ ಮತ್ತು ತುಂತುರು ಮಳೆಯನ್ನು ಆಚರಿಸಬೇಕು ಆತನ ಪ್ರಸನ್ನತೆಯು ಎಲ್ಲಾ ಅನುಭವಗಳು, ಎಲ್ಲಾ ಸ್ವಸ್ಥತೆಗಳು ಬಹಳ ಚಿಕ್ಕದಾದವುಗಳಿರಬಹುದು ನಾವು ಸಂತೋಷಪಡಲು ಅವುಗಳು ಸಾಕಷ್ಟಾಗಿವೆ. ಯಾಕೆಂದರೆ ಇದು ಸಮೃದ್ಧಿಕರವಾದ ಮಳೆಯು ಬರುತ್ತಿರುವುದರ ಸೂಚನೆಯಾಗಿದೆ!

## ನಮ್ಮ ಅಧಿಕಾರದ ಚಲಾವಣೆ

**ಮತ್ತು ನಾನು ನಿನಗೆ ಒಂದು ಮಾತನ್ನು ಹೇಳುತ್ತೇನೆ. ಅದೇನೆಂದರೆ ನೀನು - ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು. ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು. ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವುದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು.** (ಮತ್ತಾಯ 16:18,19).

ಭೂಮಿಯ ಮೇಲೆ ಪರಲೋಕವನ್ನು ಬಿಡುಗಡೆಗೊಳಿಸುವ ಅಧಿಕಾರವು ನಮಗೆ ವಹಿಸಲಾಗಿದೆ. ದೇವರು ಪರಲೋಕದಲ್ಲಿ ಯಾವುದನ್ನು ಬಂಧಿಸಿದ್ದಾನೋ ಅದನ್ನು ನಾವು ಭೂಲೋಕದಲ್ಲಿ ಬಂಧಿಸುತ್ತೇವೆ. ಪರಲೋಕದಲ್ಲಿ ಅನುಮತಿ ಕೊಡಲ್ಪಟ್ಟಿದ್ದನ್ನು ನಾವು ಭೂಮಿಯ ಮೇಲೆ ಬಿಡುಗಡೆಗೊಳಿಸುತ್ತೇವೆ. ಪರಲೋಕವು ನಮ್ಮ ಮೇಲೆ ಸುರಿಯಲು ತಡೆಯಾಗಿದವುಗಳೆಲ್ಲವನ್ನು ನಾವು ನಮ್ಮ ಆತ್ಮಿಕ ಅಧಿಕಾರ ಪ್ರಯೋಗ ಮಾಡಿ ಕಟ್ಟಿಹಾಕಬೇಕು. ನಮ್ಮ ಪ್ರದೇಶಗಳ ಮೇಲಿರುವ ಪೈಶಾಚಿಕ, ದುರಾತ್ಮಗಳ ಜಗಳ, ವಿಭಾಗಗಳು, ದೆವ್ವಗಳ ಪ್ರಭಾವ ಮುಂತಾದವುಗಳನ್ನು, ದೇವರಿಂದ ಕೊಡಲ್ಪಟ್ಟ ನಮ್ಮ ದೈವದತ್ತ ಅಧಿಕಾರದ ಚಲಾವಣೆಯಿಂದ ಹೊರದೂಡಬೇಕು.

## ಏಕೆ ಸುಸಮಯವು ಕೊನೆಗೊಳ್ಳುತ್ತದೆ?

*ದೇವರ ಪ್ರತಿಯೊಂದು ಸುರಿಸುವಿಕೆ ಅಥವಾ ಉಜ್ಜೀವನವು ಅದ್ವಿತೀಯವಾದದು, ಸರಿಸಾಟಿಯಿಲ್ಲದ್ದು ಆಗಿ ವಿಶಿಷ್ಟವಾದರೂ, ದೇವರ ಸಾರ್ವಭೌಮ ಚಲನೆಯನ್ನು ಪಡೆದುಕೊಳ್ಳುವುದು ಮತ್ತು ಸಂರಕ್ಷಣೆಮಾಡಿಕೊಳ್ಳುವುದರಲ್ಲಿ ಸಾಮಾನ್ಯರೂಪತೆಯಿದೆ. ಸಭೆ ಅಥವಾ ಸಮುದಾಯದ ಮೇಲೆ ಬೆಂಕಿಯು ಬರುವಾಗ, ಆತನ ಜನರಿಂದ ಪ್ರತಿಕ್ರಿಯೆಯನ್ನು ದೇವರು ನಿರೀಕ್ಷಿಸುತ್ತಾನೆ ಮತ್ತು ಎದುರುನೋಡುತ್ತಾನೆ. ಯಾವಾಗ ಜನರು ತಮ್ಮ ಇತರೆ ಕಾರ್ಯಸೂಚಿಪತ್ರಗಳನ್ನು (ಅಜೆಂಡಾ) ಬದಿಗೊತ್ತಿ ಕ್ರಿಸ್ತನ ಕಾರ್ಯಕ್ರಮ ಮಾಡಿಕೊಂಡು ಅವರ ಜೀವಿತಗಳಲ್ಲಿ ಆತನ ಉಜ್ಜೀವನದ ಕೆಲಸವನ್ನು ಕೇಂದ್ರಬಿಂದುವಾಗಿ ಮಾಡಿಕೊಂಡು ಇನ್ನೂ ಅನೇಕವಾದವುಗಳನ್ನು ಮಾಡುವುದರಲ್ಲಿ ಮುಂದುವರೆಯಲು ಪ್ರತಿಕ್ರಿಯೆ ತೋರಿಸುತ್ತಾರೋ ಆಗ ಸುರಿಸುವಿಕೆಯು ಮುಂದುವರೆಯುತ್ತದೆ. ಮತ್ತು ದೇವರ ಸಂದರ್ಶನವು ಆತನ ಪ್ರಸನ್ನತೆಯ ನೆಲೆಯಾಗಿ*

*ಕಂಡುಬರುತ್ತದೆ. ಬೆಂಕಿಯು ಸುರಿಯುವ ಸಮಯದಲ್ಲಿನ ನಮ್ಮ ಸಂಪೂರ್ಣ ಆಸಕ್ತಿಯನ್ನು ನಮ್ಮ ಜೀವಿತಗಳನ್ನು ಆತನ ಮೇಲೆ ಕೇಂದ್ರಿಕರಿಸಿಕೊಂಡು ನಮ್ಮ ದಿನಚರಿಗಳನ್ನು ಬರಿದು ಮಾಡಿಕೊಂಡು ಸುರಿಸುವಿಕೆಗಾಗಿ ಸರಿಯಾಗಿ ಪ್ರತಿಕ್ರಿಯೆ ತೋರಿಸಲು ಸಿದ್ಧಗೊಂಡಿರುವುದು ನಮ್ಮ ಅತ್ಯಾಸೆಯಾಗಿರಬೇಕು.*

*ಉಜ್ಜೀವನವು, ನಾವು ಜೀವಿಸುವ ರೀತಿಯನ್ನು ನಾವು ಆಲೋಚಿಸುವ ರೀತಿಯನ್ನು ಮತ್ತು ನಾವು ಸಭೆಯಾಗಿ ಮಾಡುವ ರೀತಿಯನ್ನು ಸಂಪೂರ್ಣವಾಗಿ ಬದಲಾಯಿಸುತ್ತದೆ. ಅವರ ಹೃದಯಗಳ ಮತ್ತು ಮನಸ್ಸುಗಳ ಆಳದಲ್ಲಿ ಅನೇಕರು ಅಂತಹ ಮೂಲಸ್ವರೂಪದ ಬದಲಾವಣೆಗೆ ನಿಜವಾಗಿ ಇನ್ನೂ ಸಿದ್ಧವಾಗದೆ ಇದ್ದಾರೆ. ಸುರಿಸುವಿಕೆಯು ಉಂಟಾಗಿ ಸ್ವಲ್ಪ ಸಮಯದಲ್ಲಿ ಮಾತ್ರ ಉಳಿದಿರಲು ಕಾರಣವು ಅದೇ ಜನರು ಮತ್ತು ನಾಯಕತ್ವದಲ್ಲಿರುವವರು ಇಹ ಜೀವಿತದ ಸಂಗತಿಗಳ ಬಗ್ಗೆ ತಿರುಗಿ ಕಾಳಜಿ ವಹಿಸತೊಡಗುವ ಕಾರಣಕ್ಕಾಗಿ ಇದು ಶಾಶ್ವತವಾಗಿ ಉಳಿದಿರುವುದಿಲ್ಲ. ಸ್ವಾಭಾವಿಕ ವಿಷಯಗಳಾಗಿರುವ ಇಚ್ಛೆಗಳು ಮತ್ತು ಒತ್ತಾಯಗಳು ದೇವರ ಚಲನೆಗಾಗಿ ಅವರ ಜೀವಿತಗಳಲ್ಲಿರುವ ಸ್ಥಳಗಳನ್ನು ಕದ್ದು ಕೊಂಡಿರುತ್ತವೆ ಮತ್ತು ಇದು ಮುಂದುವರೆಯುವುದಿಲ್ಲ. ದೇವರ ಚಲನೆಯು ಸಭೆಗಳಲ್ಲಿ ಮತ್ತು ನಮ್ಮ ಜೀವಿತದಲ್ಲಿನ ಸ್ಥಳಗಳಲ್ಲಿ ಮುಂದುವರೆಯಲು ಇಷ್ಟವಿಲ್ಲದ ಮತ್ತು ನಮ್ಮ ಆಸಕ್ತಿಯ ಶಿಥಿಲತೆಯ ನಿಮಿತ್ತವಾಗಿ ಆತನ ಪ್ರಸನ್ನತೆ ಮತ್ತು ನಮ್ಮ ಹುಮ್ಮಸ್ಸು ಕಳೆಗುಂದುವುದು ದೇವರ ಯೋಜನೆಯಾಗಿರುವುದಿಲ್ಲ. ನಾವು ಬೇರೆ ಯಾವುದಾದರೊಂದು ಉತ್ತಮವಾದದ್ದನ್ನು ಮಾಡಲು ಬಯಸುತ್ತಿದ್ದರೆ. ಉಜ್ಜೀವನವು ಉಂಟಾಗುವುದಿಲ್ಲ ಮತ್ತು ಅದು ಉಳಿಯುವುದಿಲ್ಲ ಹಾಗೂ ಮುಂದುವರಿಯುವುದಿಲ್ಲ. ನಾವು ಖಾಲಿಯಾಗಿ ನಾವು ಯಾವಾಗ ನಮ್ಮ ದಿನಚರಿಗಳಲ್ಲಿ ಖಾಲಿಯಾಗಿ, ನಮ್ಮ ಜೀವಿತಗಳಲ್ಲಿ ಬರಿದಾಗಿ ಮತ್ತು ಖಾಲಿಯಾದ ಪಾತ್ರೆಗಳಾಗಿ ಕಂಡುಬರುತ್ತೇವೋ ಆಗ ಮಾತ್ರವೇ ದೇವರ ಸುರಿಸುವಿಕೆಯನ್ನು ನಾವು ಅನುಭವಿಸುತ್ತೇವೆ.*

*ನಾವು ಇತರ ವಿಷಯಗಳನ್ನು ಮಾಡಲು ಪ್ರಾರಂಭಿಸಿದರೆ, ದೇವರ ಸುರಿಸುವಿಕೆಯಲ್ಲಿ ನಾವು ಮುಂದುವರೆಯುವುದಿಲ್ಲ. ನಮ್ಮ ಜೀವಿತಗಳಿಗೆ ಆತ್ಮನ ಸುರಿಸುವಿಕೆಯು ತರುವ ಉಜ್ಜೀವನವನ್ನು ಉತ್ತಮವಾದ ಸೇವೆಯ ವಿಷಯಗಳು ಸಹ ತಡೆಮಾಡಬಹುದು.*

*(2002ರಲ್ಲಿನ, ರಾನ್ ಮೇಕ್‌ಗಾಟ್ಲಿನ್ ರವರ "ಸ್ಮಿತ್‌ಟನ್ ಸುರಿಸುವಿಕೆಯನ್ನು ನಾನು ನೋಡಿದೆನು" ಎಂಬುದರಿಂದ ಹೊಂದಿಕೊಳ್ಳುವಂತೆ ಮಾರ್ಪಡಿಸಿದದು)*

***ನಮ್ಮ ಸಭೆ, ನಗರ ಮತ್ತು ನಗರದಲ್ಲಿನ ಸಭೆಗಳ ಮೇಲೆ ಆತನು ಬರುವವರೆಗೂ ಮತ್ತು ಸುರಿಸುವವರೆಗೂ ಆತನನ್ನು ಹುಡುಕುವ.***

***ಆತನನ್ನು ಮತ್ತು ಆತನ ಪ್ರಸನ್ನತೆಯನ್ನು ಅಧಿಕವಾಗಿ ಅನುಭವಿಸಲು, ಬೆಲೆಯನ್ನು ಪಾವತಿಸುವೆವೋ?***

# 4

# ನಿಮ್ಮ ಪ್ರದೇಶದ ಮೇಲೆ ಪರಲೋಕವು ತೆರೆದಿದೆಯೋ?

ಜನಸಂಖ್ಯೆ ಸ್ಫೋಟವಾಗುತ್ತಿರುವ ನಮ್ಮ ನಗರಗಳು ಮತ್ತು ಪ್ರದೇಶಗಳ ಮೇಲೆ ನಾವು ಹೇಗೆ ಪರಿಣಾಮವನ್ನುಂಟುಮಾಡಬಹುದು? ಇದನ್ನು ಬರೀ ಒಂದು ಸಭೆ ಮಾತ್ರವೇ ಮಾಡಲು ಸಾಧ್ಯವಿಲ್ಲ. ನಮ್ಮ ನಗರದಂತೆ ಮಿಲಿಯಗಟ್ಟಲೆ ಜನರಿರುವ ನಗರಗಳನ್ನು ಒಬ್ಬ ಸುವಾರ್ತಿಕ, ಸೌವಾರ್ತಿಕ ಕಾರ್ಯಕ್ರಮಗಳು ಸಂಧಿಸಲಾರವು. ನಮ್ಮ ನಗರದ ಪ್ರತಿಯೊಂದು ಭಾಗಗಳನ್ನು ತಲುಪಿ, ಅದರ ಮೇಲೆ ಪರಿಣಾಮ ಬೀರುವ ಸಮಯದವರೆಗೂ ಬೆಂಬಲವಾಗಿರುವ ದೇವರ ಪ್ರಸನ್ನತೆ ಮತ್ತು ಬಲದ ಪ್ರಬಲ ಸುರಿಸುವಿಕೆ, ಪೂರ್ಣ ವಿಕಸಿತ ಉಜ್ಜೀವನವು ನಮಗೆ ಅಗತ್ಯವಾದುದಾಗಿದೆ. ನಗರ ರೂಪಾಂತರಕ್ಕೆ ಉಜ್ಜೀವನವು ಬಹಳ ಅಗತ್ಯವಾಗಿದೆ.

ಕಳೆದುಹೋದ ಆತ್ಮಗಳ ರಕ್ಷಣೆಯ ಮತ್ತು ನಗರಗಳು ಮತ್ತು ಸಮುದಾಯಗಳ ರೂಪಾಂತರವು ಉಜ್ಜೀವನದ ಪ್ರಾರ್ಥಮಿಕ ಉದ್ದೇಶಗಳಾಗಿವೆ. ಜನಸಮೂಹದ ರಕ್ಷಣೆ, ಬಿಡುಗಡೆ ಮತ್ತು ಸ್ವಸ್ಥತೆಗೆ ನಡೆಸುವಂತಹ ದೇವರ ರಾಜ್ಯದ ಬಲವನ್ನು ಉಂಟುಮಾಡುವ, ಪರಲೋಕವು ತೆರೆದ ದೈವಿಕ ಸುಸಮಯವೇ ಉಜ್ಜೀವನವಾಗಿದೆ. ಆದ್ದರಿಂದ ಸಭೆಯು ಸುಧಾರಣೆಗೊಂಡು ನಗರದ ರೂಪಾಂತರಕ್ಕಾಗಿ ದೇವರು ಉಜ್ಜೀವನವನ್ನು ಬಿಡುಗಡೆಗೊಳಿಸುತ್ತಾನೆ. ನಾವು ಅದ್ಭುತ ಕಾರ್ಯಗಳನ್ನು ಹೊಂದಿಕೊಂಡು ಮಹಿಮೆಯಿಂದ ತುಂಬಿಕೊಂಡು ಅದನ್ನು ನಮ್ಮ ಸಮುದಾಯಗಳಿಗೂ ಕೊಂಡೊಯ್ದು ನಾವೆಲ್ಲರೂ ಒಟ್ಟಾಗಿ ಸೇರಿಬಂದು ನಮ್ಮ ನಗರದ ಮೇಲೆ ಪರಲೋಕ ತೆರೆದಿರುವುದನ್ನು ಸ್ಥಾಪಿಸಲು ಇದು ನಮಗೆ ಒಂದು ಕರೆಯಾಗಿದೆ. ಪರಲೋಕವು ತೆರೆಯುವುದಕ್ಕಾಗಿ ದೇವರನ್ನು ಹುಡುಕಲು ನಿಮ್ಮ ಭಾಗದ ಕಾರ್ಯ ನೀವು ಮಾಡುವಿರೋ?

ದೊಡ್ಡ ಬೆಂಕಿ ಹೊರಡಲು ಬರೀ ಒಂದು ಸಣ್ಣ ಕಿಡಿ ಮಾತ್ರವೇ ಸಾಕು. ನಗರವನ್ನು ಬುಡಮೇಲಾಗಿ ತಿರುಗಿಸುವ ಬೆಂಕಿಯನ್ನು ಉಂಟುಮಾಡಲು ದೇವರಿಗೆ ಬರೀ

ಬೊಗಸೆಯಷ್ಟು ಜನರು ಮಾತ್ರ ಅಗತ್ಯವಾಗಿದ್ದಾರೆ. (ಮೇಲ್ಮನೆಯಲ್ಲಿ ಕಾದುಕೊಂಡಿದ್ದ 120 ಜನರನ್ನು ಜ್ಞಾಪಿಸಿಕೊಳ್ಳಿರಿ)

**''ಆತನು ಆಕಾಶವನ್ನು ತಗ್ಗಿಸಿ ಇಳಿದು ಬಂದನು; ಆತನ ಪಾದಗಳ ಕೆಳಗೆ ಕಾರ್ಗತ್ತಲು ಇತ್ತು''** (ಕೀರ್ತನೆಗಳು 18:9).

# ಆಲ್ ಪೀಪಲ್ಸ್ ಸಭೆಯೊಡನೆ ಪಾಲುಗಾರರಾಗಿರಿ

ಆಲ್ ಪೀಪಲ್ಸ್ ಸಭೆಯ ಸೇವಕರುಗಳು ಪ್ರಮುಖವಾಗಿ ಉತ್ತರ ಭಾರತದಲ್ಲಿ (ಅ) ನಾಯಕರುಗಳನ್ನು ಬಲಗೊಳಿಸುವುದು. (ಆ) ಸೇವೆಗಾಗಿ ಯೌವ್ವನಸ್ಥರನ್ನು ತರಬೇತಿಗೊಳಿಸುವುದು (ಇ) ಕ್ರಿಸ್ತನ ಅಂಗವನ್ನು ಕಟ್ಟುವುದನ್ನು, ಬಹಳ ಮುಖ್ಯ ಗುರಿಯಾಗಿರಿಸಿಕೊಂಡಿರುವ, ಭಾರತದೇಶದಾದ್ಯಂತ ತನ್ನ ಸ್ವಂತ ಎಲ್ಲೆ ಮೀರಿದ ಸ್ಥಳೀಯ ಸಭೆಯಾಗಿದೆ. ಯೌವ್ವನಸ್ಥರಿಗಾಗಿ ಅನೇಕ ತರಭೇತಿ ಅಧ್ಯಯನ ಸಂಕೀರ್ಣ, ಸಭಾಪಾಲಕರು ಮತ್ತು ಸಭಾಸೇವಕರ ಸಮಾವೇಶವನ್ನು ವರ್ಷಪೂರ್ತಿ ನಡೆಸುವುದು ಮತ್ತು ದೇವರ ವಾಕ್ಯದಲ್ಲಿ ಮತ್ತು ದೇವರಾತ್ಮನಲ್ಲಿ ವಿಶ್ವಾಸಿಗಳನ್ನು ಕಟ್ಟುವ ಉದ್ದೇಶದೊಡನೆ ಭಾರತ ದೇಶದ ಪ್ರಾದೇಶಿಕ ಭಾಷೆಗಳು ಮತ್ತು ಇಂಗ್ಲೀಷ್ ಭಾಷೆಯಲ್ಲಿ ನಮ್ಮ ಸಾವಿರಾರು ಸಂಖ್ಯೆಯ ಪುಸ್ತಗಳನ್ನು ಉಚಿತವಾಗಿ ಹಂಚುವುದನ್ನು ಇದಕ್ಕೆ ಸೇರಿಸಲ್ಪಟ್ಟಂತೆ ಮಾಡುತ್ತಿದ್ದೇವೆ.

ಇಂತಹ ಬೃಹತ್ತಾದ ಹಣದ ಒಳಗೊಳ್ಳುವಿಕೆಯನ್ನು ಮಾಡಲು ಕರ್ತನು ತಾನೇ ನಡೆಸುತ್ತಿದ್ದಾನೆ. ಒಂದು ಬಾರಿಯ ಆರ್ಥಿಕ ಸಹಾಯ ಅಥವಾ ಪ್ರತಿ ತಿಂಗಳ ಆರ್ಥಿಕ ಸಹಾಯದ ಮೂಲಕ ನೀವು ನಮ್ಮ ಜೊತೆ ಆರ್ಥಿಕ ಸಹಾಯದಲ್ಲಿ ಪಾಲುಗಾರರಾಗಲು ನಿಮ್ಮನ್ನು ಸ್ವಾಗತಿಸುತ್ತೇವೆ. ನಮ್ಮ ದೇಶದಾದ್ಯಂತ ಮಾಡುವ ಸೇವಾಕಾರ್ಯಗಳಿಗಾಗಿ ನೀವು ಕಳಿಸುವಂತಹ ನಿಮ್ಮ ಮೊತ್ತವು ಬಹಳವಾಗಿ ಮೆಚ್ಚುಗೆವುಳ್ಳದ್ದಾಗಿರುತ್ತದೆ.

ನಿಮ್ಮ ಆರ್ಥಿಕ ಸಹಾಯವನ್ನು ಚೆಕ್ ಮೂಲಕವಾಗಿ ಕಳುಹಿಸಬಹುದು/ನಮ್ಮ ಕಛೇರಿಯ ವಿಳಾಸವಾದ "ಆಲ್ ಪೀಪಲ್ಸ್ ಸಭೆ ಬೆಂಗಳೂರು" ಗೆ ಬ್ಯಾಂಕ್ ಡ್ರಾಫ್ಟ್ ಗಳನ್ನು ಕೊಡಬಹುದು ಅಥವಾ ನಮ್ಮ ಬ್ಯಾಂಕಿನ ಖಾತೆಯ ವಿವರಗಳನ್ನು ಉಪಯೋಗಿಸಿ ನೇರವಾಗಿ ಬ್ಯಾಂಕ್ ಮೂಲಕ ನಿಮ್ಮ ಕಾಣಿಕೆಗಳನ್ನು ವರ್ಗಾಹಿಸಬಹುದು

Account Name: All Peoples Church
Account Number: 0057213809,
IFSC Code: CITI0000004
Bank: Citibank N.A., 506-507,
Level 5, Prestige Meridian 2, # 30,
M.G. Road, Bangalore - 560 001

*ದಯವಿಟ್ಟು ಗಮನಿಸಿ: ಆಲ್ ಪೀಫಲ್ಸ್ ಸಭೆಯು FCRA ಅನುಮತಿ ಹೊಂದಿಲ್ಲ ಮತ್ತು ಭಾರತೀಯ ನಾಗರೀಕರಿಂದ ಮಾತ್ರ ಬ್ಯಾಂಕ್ ಕಾಣಿಕೆಗಳನ್ನು ಅಂಗೀಕರಿಸುತ್ತಿದ್ದೇವೆ. ನಿಮ್ಮ ಕಾಣಿಕೆಗಳನ್ನು ಕೊಡುವಾಗ, ಆಲ್ ಪೀಪಲ್ಸ್ ಸಭೆಯ ಯಾವ ಕ್ಷೇತ್ರದಲ್ಲಿ ನಿಮ್ಮ ಕಾಣಿಕೆಯು ಉಪಯೋಗಿಸಬೇಕೆಂಬುದಾಗಿ ನಿಮ್ಮ ಅಪೇಕ್ಷೆಯನ್ನು ತಿಳಿಯಪಡಿಸಬಹುದು.*

ದಯವಿಟ್ಟು ನಮಗಾಗಿ ಮತ್ತು ನಮ್ಮ ಸೇವೆಗಾಗಿ ಪ್ರಾರ್ಥಿಸಿರಿ! ಧನ್ಯವಾದಗಳು ಮತ್ತು ದೇವರು ನಿಮ್ಮನ್ನು ಆಶೀರ್ವದಿಸಲಿ!

## ಆಲ್ ಪೀಪಲ್ಸ್ ಚರ್ಚ್‌ನ ಪ್ರಕಟಣೆಗಳು

ಕೆಲಸದ ಕಡೆಗೆ ಸತ್ಯವೇದದ ನೋಟ
ನಿನ್ನ ಕರೆಯನ್ನು ಕಡೆಗಣಿಸದಿರು
ನಿರೀಕ್ಷೆಯನ್ನು ಕಳೆದುಕೊಳ್ಳಬೇಡ
ವಿಶ್ವಾಸಿಗಳನ್ನು ಸಜ್ಜುಗೊಳಿಸುವುದು
ವೈಯುಕ್ತಿಕ ಮತ್ತು ತಲೆಮಾರಿನ ಬಂಧನಗಳನ್ನು ಮುರಿಯುವುದು
ನಿಮ್ಮ ಸಭಾಪಾಲಕರಿಗೆ ಹೇಗೆ ಸಹಾಯ ಮಾಡುವುದು
ದೇವರ ರಾಜ್ಯ ಕಟ್ಟುವವರು
ಪರಲೋಕವೆಂದು ಕರೆಯಲ್ಪಡುವ ನಿಜ ಸ್ಥಳ
ದೇವರ ಉದ್ದೇಶಗಳಿಗೆ ಜನ್ಮ ಕೊಡುವುದು
ಬೇರುಗಳಿಗೆ ಕೊಡಲಿ ಹಾಕುವುದು
ನಿಮ್ಮ ಜೀವಿತಕ್ಕಿರುವ ದೇವರ ಉದ್ದೇಶವನ್ನು ನೆರವೇರಿಸುವುದು
ಉಜ್ಜೀವನದಲ್ಲಿ ಒಂದು ಸಭೆ
ದೇವರ ಪ್ರಸನ್ನತೆ
ಜ್ಞಾನ, ಪ್ರಕಟನೆ ಮತ್ತು ಬಲದ ಆತ್ಮನು
ದೇವರು ಒಳ್ಳೆಯ ದೇವರಾಗಿದ್ದಾನೆ
ಅಸ್ತಿವಾರಗಳು ಭಾಗ - 1
ತೆರೆದ ಪರಲೋಕಗಳು
ಜೀವನದ ರಾತ್ರಿಯ ಸಮಯಗಳು
ಪ್ರಾಮಾಣಿಕತೆ
ನಾವು ಕ್ರಿಸ್ತನಲ್ಲಿ ಯಾರಾಗಿದ್ದೇವೆ
ಪರಿವರ್ತನೆ
ಗೌರವದ ಸಂಕೇತ

**ಉಚಿತ ಇ-ಪುಸ್ತಕಗಳು**

ನಮ್ಮ ಚರ್ಚ್ ವೆಬ್ ಸೈಟ್‌ನಿಂದ ನಮ್ಮ ಎಲ್ಲಾ ಪುಸ್ತಕಗಳ ಪಿ ಡಿ ಎಫ್ ಅನುವಾದವನ್ನು ಉಚಿತವಾಗಿ ಸಂಗ್ರಹಿಸಲು ದೊರೆಯುತ್ತವೆ. ಇತರೆ ಪ್ರಾದೇಶಿಕ ಭಾಷೆಗಳಲ್ಲೂ ಸಹ ಈ ಪುಸ್ತಕಗಳು ದೊರೆಯುತ್ತದೆ. ಇಂತಹ ಉಚಿತ ಪುಸ್ತಕಗಳಿಗಾಗಿ ಇ-ಮೇಲ್ ಅಥವಾ ಅಂಚೆಯ ಮೂಲಕವಾಗಿ ನಮ್ಮನ್ನು ಸಂಪರ್ಕಿಸಬಹುದಾಗಿದೆ.

**ಉಚಿತ ಆಡಿಯೋ ಮತ್ತು ವೀಡಿಯೊ ಸಂದೇಶಗಳು**

'ಲಿವಿಂಗ್ ಸ್ಪ್ರಾಂಗ್ ಎಂಬ ಗಾಡ್ ಟವಿಯ ಕಾರ್ಯಕ್ರಮದ ಮತ್ತು ಸಮಾವೇಶಗಳ ವಿಡಿಯೋ ರೆಕಾರ್ಡಿಂಗ್ ಗಳಿಗಾಗಿ ಮತ್ತು ನಮ್ಮ ಭಾನುವಾರದ ಸಂದೇಶಗಳ ಆಡಿಯೋ ರೆಕಾರ್ಡಿಂಗ್ (MP3)ಗಳಿಗಾಗಿ ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿ.

**ಸತ್ಯವೇದ ಶಾಲೆ**

ಮತ್ತು ಸೇವಾತರಬೇತಿಕೇಂದ್ರ

ಆಲ್ ಪೀಪಲ್ಸ್ ಸಭೆ - ಮತ್ತು ಸೇವಾತರಬೇತಿ ಕೇಂದ್ರ (A P C - BC & MTC) 2005 ರ ಆಗಸ್ಟ್ ತಿಂಗಳಲ್ಲಿ ಸ್ಥಾಪಿತವಾಯಿತು. ಇಲ್ಲಿ ಪುರುಷರು ಮತ್ತು ಸ್ತ್ರೀಯರನ್ನು ಸೇವೆಗಾಗಿ ಸಿದ್ಧಗೊಳಿಸಿ, ತರಬೇತಿಗೊಳಿಸಿ, ನಂಬಿಗಸ್ಥರಾದವರನ್ನು ಭಾರತದೇಶಕ್ಕೂ ಇತರದೇಶಗಳಿಗೂ - ಹಳ್ಳಿ, ಪಟ್ಟಣ, ನಗರ ಮತ್ತು ರಾಷ್ಟ್ರಗಳನ್ನು ಯೇಸುಕ್ರಿಸ್ತನಿಗಾಗಿ ಗೆಲ್ಲಲು ತರಬೇತಿಗೊಳಿಸುತ್ತೇವೆ.

**ಎ.ಪಿ.ಸಿ - ಬಿ.ಸಿ. / ಎಂ.ಟಿ.ಸಿ. - 2 ಪರಿವಿಡಿಗಳನ್ನು ನೀಡುತ್ತದೆ.**

- ಶೈಕ್ಷಣಿಕ ಪರಿಣಿತಿಯೊಡನೆ ಆತ್ಮಿಕ ಮತ್ತು ಪ್ರಾಯೋಗಿಕ ಸೇವಾತರಬೇತಿಯನ್ನು ಒದಗಿಸುವುದಕ್ಕಾಗಿ ಪೂರ್ಣಾವಧಿ ವಿದ್ಯಾರ್ಥಿಗಳಿಗಾಗಿ 2 ವರ್ಷಗಳ ಸತ್ಯವೇದ ಶಾಲೆಯ ಶಿಕ್ಷಣ ಪರಿವಿಡಿ. 2 ವರ್ಷಗಳ ಪರಿವಿಡಿಗಳನ್ನು ಮುಗಿಸಿದ ವಿದ್ಯಾರ್ಥಿಗಳು **ಡಿಪ್ಲೋಮಾ ಇನ್ ಥಿಯಾಲಜಿ ಮತ್ತು ಕ್ರಿಶ್ಚಿಯನ್ ಮಿನಿಸ್ಟ್ರಿ** (Dip.Th/Cm) ಪಡೆದುಕೊಳ್ಳುತ್ತಾರೆ. ತರಗತಿಗಳು ಆಂಗ್ಲಭಾಷೆಯಲ್ಲಿ ನಡೆಸಲ್ಪಡುತ್ತವೆ. ನಮ್ಮ ಬೋಧನಾ ವಿಭಾಗವು ತರಬೇತಿಹೊಂದಿದ ಮತ್ತು ದೇವರ ವಾಕ್ಯದ ಅಭಿಷೇಕ ಹೊಂದಿದ ಶಿಕ್ಷಕರನ್ನು ಒಳಗೊಂಡಿದೆ. ಎಲ್ಲಾ ಬೋಧಕರು ಹಾಗೂ ವಿದ್ಯಾರ್ಥಿಗಳು ಎ.ಪಿ.ಸಿ ಯ ಅಧ್ಯಯನ ಕೇಂದ್ರ ಮತ್ತು ಗ್ರಂಥಾಲಯವನ್ನು (Sc & L) ಉಪಯೋಗಿಸಬಹುದಾಗಿದೆ.

- ಪ್ರಾಯೋಗಿಕ ತರಬೇತಿ ಹೊಂದಲು ಅಪೇಕ್ಷಿಸುವ ನಮ್ಮ ಸತ್ಯವೇದ ಶಾಲೆಯ ಪಧವೀದರರಿಗೆ ಪ್ರಾಯೋಗಿಕ ಸೇವಾ ತರಬೇತಿ ನೀಡುತ್ತೇವೆ. ಒಂದು ಅಥವಾ ಹೆಚಿಚಿನ ವರ್ಷಗಳನ್ನು ಮುಗಿಸಿದವರು **ಪ್ರಾಯೋಗಿಕ ಸೇವಾ ಪ್ರಮಾಣಪತ್ರ** ಪಡೆದುಕೊಳ್ಳುತ್ತಾರೆ ಮತ್ತು ತೊಡಗಿಸಿಕೊಂಡ ಅವಧಿಯು ಸ್ಪಷ್ಟವಾಗಿ ನಮೂದಿಸಲ್ಪಡುತ್ತದೆ.

ಹೆಚ್ಚಿನ ಮಾಹಿತಿಗಳಿಗಾಗಿ www.apcwo.org/biblecollege ನ್ನು ಸಂಪರ್ಕಿಸಿ.

## ಆಲ್ ಪೀಪಲ್ಸ್ ಸಭೆಯ ಬಗ್ಗೆ

ನಮ್ಮ ಬೆಂಗಳೂರು ನಗರದಲ್ಲಿ ಉಪ್ಪು ಮತ್ತು ಬೆಳಕು ಆಗಿರಬೇಕೆಂದು ಮತ್ತು ಭಾರತ, ಪ್ರಪಂಚದ ಎಲ್ಲಾ ರಾಷ್ಟ್ರಗಳಿಗೂ ಧ್ವನಿ ಆಗಿರಬೇಕೆಂಬುದು ಆಲ್ ಪೀಪಲ್ಸ್ ಸಭೆಯ ದರ್ಶನವಾಗಿದೆ.

ನಾವು, ಆತನ ಪವಿತ್ರಾತ್ಮನ ಪ್ರಮಾಣಿಕರಣ ಮತ್ತು ರಾಜಿ ಹೊಂದದ, ಅಭಿಷೇಕಹೊಂದಿದ ದೇವರ ವಾಕ್ಯವನ್ನು ಪರಿಪೂರ್ಣವಾಗಿ ಪ್ರಸ್ತುತ ಪಡಿಸುವ ಬದ್ಧತೆ ಹೊಂದಿದ್ದೇವೆ. ನಾವು ಒಳ್ಳೆಯ ಸಂಗೀತ, ಸೃಜನಾತ್ಮಕ ಪ್ರಸ್ತುತಿ, ಪ್ರತಿಭಾವಂತ ಸಮರ್ಥನೆಗಳು, ಸಮಕಾಲೀನ ಸೇವಾ ತಂತ್ರಗಳು, ಇತ್ತೀಚಿನ ತಂತ್ರಜ್ಞಾನ ಮುಂತಾದವುಗಳು, ದೈವದತ್ತ ವಿಧಾನಹೊಂದಿದ ದೇವರ ವಾಕ್ಯವನ್ನು ಪವಿತ್ರಾತ್ಮನ ಸೂಚಕಕಾರ್ಯ, ಅಧ್ಭುತಕಾರ್ಯ, ಮಹತ್ಕಾರ್ಯ ಮತ್ತು ಪವಿತ್ರಾತ್ಮನ ವರದಲ್ಲಿ ಸಾರುವುದನ್ನು ಬದಲಿಸಲು ಸಾಧ್ಯವಿಲ್ಲವೆಂದು ನಂಬುತ್ತೇವೆ. (1 ಕೊರಿಂಥದವರಿಗೆ 2: 4,5, ಇಬ್ರಿಯರಿಗೆ 2: 3,4.) ಯೇಸು ನಮ್ಮ ಉದ್ದೇಶ, ದೇವರ ವಾಕ್ಯ ನಮ್ಮ ವಿಷಯ, ಪವಿತ್ರಾತ್ಮನ ಬಲ ನಮ್ಮ ಕ್ರಮ, ಜನರು ನಮ್ಮ ಅನುರಾಗ, ಕ್ರಿಸ್ತನ ಮಾದರಿಯ ಪ್ರೌಢತೆ ನಮ್ಮ ಗುರಿಯಾಗಿದೆ.

ಬೆಂಗಳೂರನ್ನು ಪ್ರಮುಖವಾಗಿಟ್ಟುಕೊಂಡು, ಹೊಸ ಸಭೆಗಳು ನಿಯತಕಾಲಿಕವಾಗಿ ಭಾರತದಾದ್ಯಂತ ಸ್ಥಾಪಿಸಲ್ಪಡುತ್ತಿವೆ. ಪ್ರಸಕ್ತವಾದ ಪಟ್ಟಿಯನ್ನು ಪಡೆಯಲು ಮತ್ತು ಆಲ್ ಪೀಪ್‌ಲ್ಸ್ ಸಭೆಯ ಸ್ಥಳಗಳ ಬಗ್ಗೆ ಮಾಹಿತಿಗಳನ್ನು ಪಡೆದುಕೊಳ್ಳಲು, ನಮ್ಮ ವೆಬ್ ಸೈಟ್‌ನ್ನು ಸಂಪರ್ಕಿಸಿರಿ. www.apcwo.org ಅಥವಾ contact@apcwo.org ಗೆ ಇ-ಮೇಲ್ ಕಳುಹಿಸಿರಿ.

# ನಿಮ್ಮನ್ನು ಪ್ರೀತಿಸುವ ದೇವರನ್ನು ನೀವು ತಿಳಿದಿದ್ದಿರೋ?

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ, ದೇವರು ಮನುಷ್ಯನಾಗಿ ಭೂಲೋಕಕ್ಕೆ ಬಂದನು. ಆತನ ಹೆಸರು ಯೇಸು.

ಆತನು ಪಾಪರಹಿತ ಜೀವನ ನಡಿಸಿದನು. ಯೇಸುವು ಶರೀರಧಾರಿಯಾದ ದೇವರಾಗಿದ್ದದರಿಂದ ಆತನು ಹೇಳಿದ್ದರಲ್ಲಿ, ಮಾಡಿದ್ದರಲ್ಲಿ ದೇವರನ್ನು ನಮಗೆ ಪ್ರಚುರಪಡಿಸಿದ್ದಾನೆ. ಆತನು ಆಡಿದ ಮಾತುಗಳು ಸ್ವತಃ ದೇವರ ಮಾತುಗಳೇ ಆಗಿದ್ದವು. ಆತನು ಮಾಡಿದ ಎಲ್ಲಾ ಕಾರ್ಯಗಳು ದೇವರ ಕಾರ್ಯಗಳೇ - ಯೇಸು ಭೂಲೋಕದಲ್ಲಿ ಅನೇಕ ಅದ್ಭುತ ಕಾರ್ಯಗಳನ್ನು ಮಾಡಿದನು. ರೋಗಗಳಲ್ಲಿ ನರಳುತ್ತಿದ್ದವರನ್ನು ಆತನು ಗುಣಪಡಿಸಿದನು. ಕುರುಡರಿಗೆ ಕಣ್ಣುಕೊಟ್ಟನು. ಕಿವುಡರನ್ನು ಮುಟ್ಟಿ ಕಿವಿಕೇಳುವಂತೆ ಮಾಡಿದನು. ಕುಂಟರನ್ನು ನಡೆದಾಡುವಂತೆ ಮಾಡಿದನು. ಎಲ್ಲಾ ಬಗೆಯ ರೋಗಗಳನ್ನು ವಾಸಿಮಾಡಿದನು. ಹಸಿದ ಜನರಿಗೆ ಐದುರೊಟ್ಟಿ, ಎರಡು ಮೀನುಗಳಿಂದ ಉಣ್ಣಲು ಬಡಿಸಿದನು. ಸಮುದ್ರದ ಮೇಲೆ ನಡೆದನು, ಸಮುದ್ರದ ಬಿರುಗಾಳಿಯನ್ನು ಶಾಂತಗೊಳಿಸಿದನು. ಇನ್ನು ಅನೇಕ ಮಹತ್ಕಾರ್ಯಗಳನ್ನು ಮಾಡಿದನು.

**ಈ ಎಲ್ಲಾ ಅದ್ಭುತ ಕಾರ್ಯಗಳು ನಮಗೆ ದೇವರು, ಒಳ್ಳೆಯ ದೇವರು, ಆತನು ಜನರೆಲ್ಲರೂ, ಆರೋಗ್ಯದಿಂದಲೂ, ಸಂತೋಷದಿಂದಲೂ ಕ್ಷೇಮದಿಂದಲೂ ಇರಬೇಕೆಂದು ಬಯಸುತ್ತಾನೆ. ದೇವರು, ಜನರ ಎಲ್ಲಾ ಕೊರತೆಗಳನ್ನು ಪೂರೈಸುತ್ತಾನೆ ಮತ್ತು ನೀಗಿಸುತ್ತಾನೆ ಎಂದು ಪ್ರಕಟಿಸುತ್ತವೆ.**

ಆದುದರಿಂದ ದೇವರು ಯಾಕೆ ಮನುಷ್ಯನಾಗಿ ಈ ಲೋಕಕ್ಕೆ ಬರಲು ತೀರ್ಮಾನಿಸಿದನು? ಯೇಸುವು ಯಾಕೆ ಬಂದನು?

ನಾವೆಲ್ಲರೂ ಪಾಪ ಮಾಡಿದ್ದೇವೆ. ದೇವರ ದೃಷ್ಟಿಯಲ್ಲಿ ಅಂಗೀಕಾರವಾಗದ ಅನೇಕ ಕಾರ್ಯಗಳನ್ನು ಮಾಡಿದ್ದೇವೆ. ಪಾಪವು, ಅದರ ಕಾರ್ಯಫಲವನ್ನು ಹೊಂದಿದೆ. ಪಾಪವು ದೇವರಿಗೂ, ನಮಗೂ ನಡುವೆಯಿರುವ ಕದಲಿಸಲಾಗದ ಅಡ್ಡ ಗೋಡೆಯಾಗಿದೆ. ಪಾಪವು ನಮ್ಮನ್ನು ದೇವರಿಂದ ಬೇರ್ಪಡಿಸುತ್ತದೆ. ನಮ್ಮನ್ನು ಸೃಷ್ಟಿಸಿದ ದೇವರನ್ನು ತಿಳಿಯಲು ಮತ್ತು ಅರ್ಥಭರಿತ ಸಂಬಂಧವನ್ನು ಆತನೊಂದಿಗೆ ಹೊಂದಿಕೊಳ್ಳುವುದನ್ನು ಪಾಪವು ತಡೆದು ಹಿಡಿಯುತ್ತದೆ. ಆದುದರಿಂದ ನಮ್ಮಲ್ಲಿ ಅನೇಕರು ನಿರರ್ಥಕವಾದ ಬೇರೆ ವಿಷಯಗಳಿಂದ ಈ ಶೂನ್ಯವನ್ನು ತುಂಬಿಸಲು ಪ್ರಯತ್ನಿಸುತ್ತೇವೆ.

ನಮ್ಮ ಪಾಪದ ಮತ್ತೊಂದು ಫಲವೇನೆಂದರೆ ನಮ್ಮನ್ನು ದೇವರಿಂದ ನಿತ್ಯಕ್ಕೂ ಬೇರ್ಪಡಿಸುತ್ತದೆ. ದೇವರ ನ್ಯಾಯಸ್ಥಾನದಲ್ಲಿ ಪಾಪದ ಶಿಕ್ಷೆ ಮರಣವಾಗಿದೆ. ಮರಣವು ನಮ್ಮನ್ನು ನರಕದಲ್ಲಿ ದೇವರಿಂದ ಶಾಶ್ವತವಾಗಿ ಅಗಲಿಕೆಗೊಳಿಸುತ್ತದೆ. ಅಥವಾ ದೂರಸರಿಯುವಂತೆ ಮಾಡುತ್ತದೆ.

ಆದರೆ ನಮಗಿರುವ ಶುಭ ಸಮಾಚಾರವೇನೆಂದರೆ ನಾವು ಪಾಪಗಳಿಂದ ಸ್ವತಂತ್ರರಾಗಬಹುದು ಮತ್ತು ದೇವರೊಂದಿಗೆ ನವೀಕೃತಗೊಳ್ಳಬಹುದು. ಸತ್ಯವೇದವು ''ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥವರವು ನಮ್ಮ ಕರ್ತವಾದ ಕ್ರಿಸ್ತ ಯೇಸುವಿನಲ್ಲಿರವ ನಿತ್ಯಜೀವ'' ಎಂದು ಹೇಳುತ್ತದೆ (ರೋಮಪುರ 6:23) ಯೇಸು ಪ್ರಪಂಚದ ಪಾಪಗಳಿಗೆ, ಶಿಲುಬೆಯ ಮೇಲೆ ಪ್ರಾಣಕೊಡುವ ಮೂಲಕ ಪಾಪದ ವಶದಿಂದ ಎಲ್ಲರನ್ನು ಬಿಡುಗಡೆಮಾಡಿದ್ದಾನೆ. ಮೂರನೇ ದಿನದಲ್ಲಿ ಎದ್ದು ಬಂದಿದ್ದಾನೆ. ಜೀವಿಸುವವನಾಗಿ ಅನೇಕರಿಗೆ ಕಾಣಿಸಿಕೊಂಡನು. ಮತ್ತು ಪರಲೋಕಕ್ಕೆ ಏರಿ ಹೋದನು.

ದೇವರು, ಕರುಣೆ, ಪ್ರೀತಿಯುಳ್ಳ ದೇವರು. ಯಾವನಾದರೂ ನರಕದಲ್ಲಿರಬೇಕೆಂದು ಆತನು ಬಯಸುವ ದೇವರಲ್ಲ ಆತನು, ಇಡೀ ಮನುಷ್ಯ ಕುಲವು ಪಾಪದ ಬಂಧನದಿಂದ ಸ್ವತಂತ್ರಗೊಳ್ಳಲು, ಪಾಪದ ಶಾಶ್ವತ ದೋಷ ಫಲಗಳಿಂದ ಬಿಡುಗಡೆ ಹೊಂದುವಂತೆ, ಮಾರ್ಗ ಮಾಡಿಕೊಡಲು ಬಂದನು. ಆತನು ಪಾಪಿಗಳನ್ನು ರಕ್ಷಿಸಲು ಬಂದನು. ನನ್ನಂತೆಯೇ, ನಿಮ್ಮಂತೆಯೇ, ಜನರನ್ನು ಪಾಪದಿಂದ, ನಿತ್ಯತ್ವದ ಮರಣದಿಂದ ಬಿಡುಗಡೆ ಮಾಡಲು ಬಂದನು.

ಈ ಉಚಿತವಾದ ಪಾಪಗಳ ಕ್ಷಮಾಪಣೆಯನ್ನು ಪಡೆಯಬೇಕಾದರೆ ನಾವು ಒಂದೇ ಒಂದು ವಿಷಯವನ್ನು ಮಾಡಬೇಕೆಂದು ಸತ್ಯವೇದ ಹೇಳುತ್ತದೆ. ನೀನು ಯೇಸುಕ್ರಿಸ್ತನು ಶಿಲುಬೆಯ ಮೇಲೆ ಮಾಡಿದ್ದೆಲ್ಲವನ್ನು ಅಂಗೀಕರಿಸಿಕೊಳ್ಳಬೇಕು. ಮತ್ತು ಸಂಪೂರ್ಣ, ಯಥಾರ್ಥ ಹೃದಯದಿಂದ ಯೇಸುವನ್ನು ನಂಬಬೇಕು.

**''ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು''** (ಅಪೊಸ್ತಲರ ಕೃತ್ಯ 10:43)

**''ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆಮಾಡಿಕೊಂಡು ದೇವರು ಆತನನ್ನು ಸತ್ತವರೊಳಗೆ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು ಎಂಬುದೇ''** (ರೋಮಾಪುರದವರಿಗೆ 10:9)

ನೀವು ಸಹ ಯೇಸುಕ್ರಿಸ್ತನನ್ನು ನಂಬಿದರೆ ನಿಮ್ಮ ಪಾಪಗಳಿಗೆ ಕ್ಷಮಾಪಣೆಯನ್ನು ಮತ್ತು ಪರಿಹಾರಗಳನ್ನು ಹೊಂದಿಕೊಳ್ಳಬಹುದು. ಯೇಸುವಿನ ಮೇಲೆ ನಂಬಿಕೆಯಿಡಲು, ಮತ್ತು ಆತನು ನಿಮಗೋಸ್ಕರ ಶಿಲುಬೆಯ ಮೇಲೆ ಮಾಡಿದ ಕಾರ್ಯಗಳಲ್ಲಿ ನಂಬಿಕೆಯಿಟ್ಟು ತೀರ್ಮಾನ ತೆಗೆದುಕೊಳ್ಳಲು ಈ ಮುಂದಿನ ಪ್ರಾರ್ಥನೆಯು ಸಹಾಯ ಮಾಡುವುದು. ಯೇಸು ಕ್ರಿಸ್ತನು ನಿಮಗಾಗಿ ಏನು ಮಾಡಿದನೆಂದೂ ಮತ್ತು ನಿಮ್ಮ ಪಾಪಗಳ ಕ್ಷಮಾಪಣೆ ಮತ್ತು ಶುದ್ಧೀಕರಣವನ್ನು ಹೊಂದಿಕೊಳ್ಳುವಂತೆಯೂ ಮತ್ತು ನಿಮ್ಮ ಅಂಗೀಕಾರವನ್ನು ತೋರಿಸುವಂತೆಯೂ ಸಹಾಯ ಮಾಡುತ್ತದೆ. ಈ ಪ್ರಾರ್ಥನೆ ಬರೀ ಮಾರ್ಗದರ್ಶಿಯಾಗಿದೆ. ನಿಮ್ಮ ಸ್ವಂತ ಮಾತುಗಳಲ್ಲಿ ಪ್ರಾರ್ಥಿಸಬಹುದು.

*ಪ್ರಿಯ ಕರ್ತನಾದ ಯೇಸುವೇ, ಇಂದು ನೀನು ನನಗಾಗಿ ಶಿಲುಬೆ ಮೇಲೆ ಮಾಡಿದ್ದನ್ನು ಅರ್ಥ ಮಾಡಿಕೊಂಡಿದ್ದೇನೆ. ನೀನು ನನಗಾಗಿ ಪ್ರಾಣ ಕೊಟ್ಟೆ. ನನಗಾಗಿ ನಿನ್ನ ಪವಿತ್ರವಾದ ರಕ್ತ ಸುರಿಸುವ ಮೂಲಕ ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದಿ, ಇದರಿಂದ ನಾನು ಕ್ಷಮಿಸಲ್ಪಟ್ಟೆನು. ಯಾರ್‍ಯಾರು ಆತನ ಮೇಲೆ ನಂಬಿಕೆಯಿಟ್ಟರೋ, ಅವರು ಪಾಪಗಳ ಕ್ಷಮಾಪಣೆ ಹೊಂದಿದರು ಎಂದು ಸತ್ಯವೇದವು ನನಗೆ ತಿಳಿಸುತ್ತದೆ.*

*ಈ ದಿನ ನಾನು ನಿನ್ನನ್ನು ನಂಬುತ್ತೇನೆ. ನೀನು ನನಗಾಗಿ ಸಾಯುವುದರ ಮೂಲಕವೂ, ಮೂರನೇ ದಿನದಲ್ಲಿ ಜೀವಿತನಾಗಿ ಎದ್ದು ಬಂದದ್ದರ ಮೂಲಕವೂ ನೀನು ಮಾಡಿದ್ದನ್ನು ಅಂಗೀಕರಿಸಿಕೊಳ್ಳುತ್ತೇನೆ. ನನ್ನ ಒಳ್ಳೆಯ ಕೆಲಸಗಳಿಂದಲೂ, ಬೇರೊಬ್ಬನಿಂದಲೂ ನನ್ನನು ರಕ್ಷಿಸಿಕೊಳ್ಳಲು ಆಗುವುದಿಲ್ಲ. ನಾನು ನನ್ನ ಪಾಪಗಳ ಕ್ಷಮಾಪಣೆ ಸಂಪಾದಿಸಲು ಸಾಧ್ಯವಿಲ್ಲ.*

*ಈ ದಿನ ನಾನು ನನ್ನ ಹೃದಯದಿಂದ ನಂಬಿ ನನ್ನ ಬಾಯಿಂದ, ''ನೀನು ನನಗಾಗಿ ಸತ್ತೇ, ನನ್ನ ಪಾಪಗಳ ಪ್ರಾಯಶ್ಚಿತ್ತ ಮಾಡಿದ್ದಿ. ಮರಣದಿಂದ ಜೀವಿತನಾಗಿ ಎದ್ದು ಬಂದಿದ್ದಿ ಎಂಬ ನಿನ್ನಲ್ಲಿ ಇಟ್ಟ ನಂಬಿಕೆಯಿಂದ, ನನ್ನ ಪಾಪಗಳ ಕ್ಷಮಾಪಣೆ, ಶುದ್ಧೀಕರಣ ಪಡೆದುಕೊಂಡೆ'' ಎಂದು ಹೇಳುತ್ತೇನೆ.*

*ಯೇಸುವೇ ನಿನಗೆ ವಂದನೆಗಳು. ನಿನ್ನನ್ನು ಪ್ರೀತಿಸಲು ಸಹಾಯ ಮಾಡು. ನಿನ್ನನ್ನು ಇನ್ನೂ ತಿಳಿಯಲು ಮತ್ತು ನಿನಗೆ ನಂಬಿಗಸ್ತನಾಗಿರಲು ಸಹಾಯಮಾಡು. ಆಮೇನ್*

ಕ್ರಿಸ್ತನ ದೇಹವು, ಭೌಗೋಳಿಕ ಪ್ರದೇಶಗಳ ಸಮುದಾಯಗಳ ಮತ್ತು ಜನರ ಮೇಲೆ ಪರಲೋಕವು ತೆರೆದಿರುವುದರ ಬಗ್ಗೆ ನವೀನ ಪ್ರಜ್ಞೆಯನ್ನು ಮತ್ತು ಸೂಕ್ಷ್ಮ ಪರಿಜ್ಞಾನವನ್ನು ಸಂಪಾದಿಸುತ್ತಿದೆ. ಪ್ರಪಂಚದಲ್ಲಿನ ಕೆಲವು ಖಚಿತ ಪ್ರದೇಶಗಳಾದ ವೇಲ್ಸ್, ಫ್ಲೋರೀಡಾ, ಭಾರತದಲ್ಲಿನ ಶಿಲ್ಲಾಂಗ್, ಮುಂತಾದ ಪ್ರದೇಶಗಳು ತೆರೆದ ಪರಲೋಕದ ''ಬಿಸಿ ಸ್ಥಳಗಳಾಗಿ'' ಗೋಚರಿಸುತ್ತಿವೆ. ಈ ಪುಸ್ತಕವು ಪರಲೋಕವು ತೆರೆದಿರುವುದು, ಇದರ ಅರ್ಥ ಮತ್ತು ಫಲಿತಾಂಶವೇನಾಗಬಹುದು ಎಂಬುದನ್ನು ಪ್ರಕಟಿಸುವ ಸತ್ಯವೇದದ ವಚನಭಾಗಗಳ ಸಾಮಾನ್ಯ ಅಧ್ಯಯನವಾಗಿದೆ. ಅನೇಕರು, ಅವರ ಜೀವಿತಗಳ ಮೇಲೆ ''ಪರಲೋಕವು ತೆರೆಯುವುದನ್ನು'' ಸ್ಥಾಪಿಸಲು, ಮತ್ತು ಪ್ರಾರ್ಥಿಸಲು ಪ್ರೋತ್ಸಾಹಗೊಳ್ಳುವರೆಂದು ನಾವು ನಂಬುತ್ತೇವೆ. ಒಂದು ಪ್ರದೇಶದಲ್ಲಿರುವ ಸ್ಥಳೀಯ ಸಭೆಗಳ ಸುಧಾರಣೆ ಮತ್ತು ಆ ನಗರದ ಅಥವಾ ಪ್ರದೇಶದ ರೂಪಾಂತರಕ್ಕಾಗಿ ಪರಲೋಕ ತೆರೆಯಲು ಐಕ್ಯತೆಯಿಂದ ಪರಿಶ್ರಮಶೀಲದಿಂದ ಪ್ರಾರ್ಥಿಸುತ್ತಾರೆ. ಎಂಬುದಾಗಿ ನಾವು ನಂಬುತ್ತೇವೆ.

ಆಶಿಷ್ ರಾಯ್‌ಚೂರ್

**All Peoples Church & World Outreach**
# 319, 2nd Floor, 7th Main, HRBR Layout,
2nd Block, Kalyan Nagar, Bangalore 560 043
Karnataka, INDIA

Phone: +91-80-25452617, +91-80-65970617
Email: contact@apcwo.org
Website: www.apcwo.org

ALL PEOPLES CHURCH